ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 5 ಜನವರಿ 27-ಫೆಬ್ರವರಿ 2 1997 ಬೆಲೆ ರೂ. 2.00

ಮತ್ತೆ ಬೆಲೆಗಳನ್ನೇರಿಸುವ ಸನ್ನಾಹ?

ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡುವ ನಿಟ್ಟಿನಲ್ಲಿ ನೀರಾವರಿ ಶುಲ್ಕವನ್ನು ವಿಧಿಸುವ, ಕರ್ನಾಟಕದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಪ್ರಯಾಣ ದರವನ್ನು ಏರಿಸುವ, ವಿದ್ಯುತ್ ದರಗಳನ್ನು ಪುನರ್ವಿಮರ್ಶಿಸುವ ಕುರಿತು ತಮ್ಮ ಮಂತ್ರಿ ಮಂಡಲದ ನಿರ್ಣಯವನ್ನು ಮುಖ್ಯ ಮಂತ್ರಿ ಜೆ.ಹೆಚ್.ಪಟೇಲರು ಬಯಲು ಗೊಳಿಸಿದ್ದಾರೆ.

ಪೆಟ್ರೋಲ್ ದರ ಏರಿಕೆ ಇಲ್ಲವೆಂದು ಪ್ರಧಾನಮಂತ್ರಿ ದೇವೇಗೌಡರು ಹೇಳುತ್ತ ಬರುತ್ತಿದ್ದರೂ ಕೂಡಾ(ಇದರ ಕುರಿತು ಎಡಪಕ್ಷಗಳ ಪ್ರಬಲ ವಿರೋಧಕ್ಕೆ ಮಣಿದು)ಆರ್ಥಿಕ ಮಂತ್ರಿ ಚಿದಂಬರಂ ಅವರ ಒತ್ತಡದಿಂದಾಗಿ ಕೆಲವೇ ದಿವಸಗಳಲ್ಲಿ ಬೆಲೆ ಹೆಚ್ಚಳ ಮಾಡುವ ಸನ್ನಾಹದಲ್ಲಿದ್ದಾರೆ.

ಕೇಂದ್ರ ಮತ್ತು ರಾಜ್ಯಗಳ ಬಜೆಟ್ ಮಂಡನೆಗೆ ಇನ್ನು ಕೆಲವೇ ವಾರಗಳಿರುವಾಗ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಗತ್ಯ ಸೇವೆಗಳ ದರಗಳನ್ನು ಹೆಚ್ಚಿಸುವ ಅನಿವಾರ್ಯತೆಯನ್ನು ಪ್ರಸ್ತಾಪ ಮಾಡುತ್ತಿವೆ. ಹಿಂದೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ ಇದೇ ತಂತ್ರಗಳನ್ನು ಹೂಡುತ್ತಿದ್ದರು. ಬೆಲೆ ಹೆಚ್ಚಳದ ಸಮಸ್ಯೆ ಲೋಕಸಭೆ-ರಾಜ್ಯ ಸಭೆಗಳಲ್ಲಿ ಚರ್ಚೆಗೆ ಬರಬಾರದೆಂಬ ದುರುದ್ದೇಶದಿಂದಲೇ ಲೋಕಸಭೆ ಮತ್ತು ವಿಧಾನ ಸಭೆಗಳ ಬಜೆಟ್ ಅಧಿವೇಶನ ಪ್ರಾರಂಭವಾಗುವ ಮುಂಚಿಯೇ ಆಡಳಿತಾತ್ಮಕ ಕ್ರಮಗಳ ಮೂಲಕ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಿಸುವ, ಪ್ರಯಾಣ ದರವನ್ನು ಏರಿಸುವ ಪದ್ಧತಿಯನ್ನು ಅನುಸರಿಸುತ್ತ ಬಂದಿವೆ. ಈಗ ಕೇಂದ್ರದಲ್ಲಿ ಸಂಯುಕ್ತ ರಂಗದ ಸರಕಾರ, ಕರ್ನಾಟಕದಲ್ಲಿ ಜನತಾದಳ ಸರಕಾರ ಅಧಿಕಾರದಲ್ಲಿದೆ. ಈ ಎರಡೂ ಸರಕಾರಗಳು ಕಾಂಗ್ರೆಸ್ ಆಡಳಿತೆಯ ನೀತಿಯನ್ನೇ ಅನುಸರಿಸುತ್ತಿರುವುದು ಖಂಡನೀಯ. ಈ ಧೋರಣೆ ಬಿಜೆಪಿ, ಕಾಂಗ್ರೆಸ್‌ಗಳನ್ನು ಜನರಿಂದ ದೂರಮಾಡಲಿಕ್ಕೆ, ಸಂಯುಕ್ತ ರಂಗ ಸರಕಾರ, ಜನತಾದಳದ ಸರಕಾರ ಕಾಂಗ್ರೆಸ್ ಮತ್ತು ಬಿಜೆಪಿಯ ಆರ್ಥಿಕ ಧೋರಣೆಗಳ ವಿರುದ್ಧವಾದ ಜನಪರವಾದ ಪರ್ಯಾಯ ಧೋರಣೆಗಳನ್ನು ಅನುಸರಿಸಬೇಕೆಂಬ ಮತದಾರರ ಭಾವನೆಗೆ, ಅವರ ಇಚ್ಛೆಗೆ ವಿರುದ್ಧವಾಗಿದೆ. ಆದ್ದರಿಂದ ದೇವೇಗೌಡರು ಮತ್ತು ಜೆ.ಹೆಚ್.ಪಟೇಲರು ಬಜೆಟ್ ಮಂಡನೆಯ ಮಂಚಿತವಾಗಿಯೆ ಅತ್ಯಾವಶ್ಯಕ ವಸ್ತುಗಳ ಮತ್ತು ಪ್ರಯಾಣ ದರವನ್ನು ಹೆಚ್ಚಿಸುವ ನೀತಿಯನ್ನು ಕೈಬಿಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಎರಡೂ ಸರಕಾರಗಳನ್ನು ಒತ್ತಾಯಿಸುತ್ತದೆ.

ಎಸ್.ಕೆ.ಉಪಾಧ್ಯಾಯ

ಪೆಟ್ರೋಲ್ ಆಮದಿನಿಂದಾಗಿ ಉಂಟಾಗಿರುವ ಕೊರತೆಯನ್ನು ತುಂಬಿಕೊಳ್ಳಲು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕೇಂದ್ರ ಸರಕಾರದ ಮುಂದೆ ಹಲವಾರು ಸೂಚನೆಗಳನ್ನು ಮುಂದೆ ಮಾಡಿದೆ. ಆದರೆ ದೇವೇಗೌಡ ಸರಕಾರ ಅದರತ್ತ ಗಮನ ಹರಿಸದೆ, ಪೆಟ್ರೋಲ್ ಆಮದಿನಿಂದಾಗಿ ಉಂಟಾಗಿರುವ ತೈಲ ನಿಧಿಯ ಕೊರತೆಯನ್ನು ತುಂಬಿಕೊಳ್ಳಲು ಪೆಟ್ರೋಲ್ ದರ ಹೆಚ್ಚಳ ಒಂದೇ ಉಪಾಯವೆಂದು ತಿಳಿದಿರುವುದು, ಹಾಗೆಯೇ ಇನ್ನು ಹೆಚ್ಚಿನ ಸಾಲವನ್ನು ಎತ್ತುವುದು ಒಂದೇ ಉಪಾಯವೆಂದು ಹೇಳುತ್ತಿರುವುದು ಸರಿಯಲ್ಲ.

ಅದರಂತೆಯೇ ಜೆ.ಎಚ್.ಪಟೇಲರ ಸರಕಾರ 'ಪ್ರಸ್ತುತ ವರ್ಷದಲ್ಲಿ ಸುಮಾರು 400 ಕೋಟಿ ರೂಪಾಯಿಗಳ ಆದಾಯ ಕೊರತೆಯಾಗುವ ಸಂಭವವಿದೆ' ಎಂದು ಹೇಳಿ ಬೆಲೆ ಹೆಚ್ಚಿಸುವ ಕ್ರಮವನ್ನು ಅನುಸರಿಸುತ್ತಿರುವುದು ಸರಿಯಲ್ಲ. ಸಾರಿಗೆ ಸಂಸ್ಥೆ ಕೆಲವು ವರ್ಷಗಳಿಂದಲೂ ನಷ್ಟ ಅನುಭವಿಸುತ್ತಿರುವುದು ಹೊಸದೇನಲ್ಲ. ಆದರ ನಷ್ಟ ತಗ್ಗಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುವ ಹೇಳಿಕೆಗಳು ಮಂತ್ರಿಗಳಿಂದ ಹೊರಬಿದ್ದಿವೆ. ಆದರೆ ಸಾರಿಗೆಸಂಸ್ಥೆಯ ದಕ್ಷತೆ ಹೆಚ್ಚಿಸಿ, ನಷ್ಟ ತಗ್ಗಿಸುವ ಬಗ್ಗೆ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸುವಲ್ಲಿ ವೈಫಲ್ಯತೆ, ಪ್ರಯಾಣ ದರ ಹೆಚ್ಚಿಸಬೇಕೆಂಬ ವಿಚಾರಕ್ಕೆ ಕಾರಣವಾಗಿದೆ. ಸಾರಿಗೆ ಸಂಸ್ಥೆ ಮತ್ತು ಕೆಇಬಿಯ ಆಡಳಿತೆ ಬಿಗಿಗೊಳಿಸಿ ಸೋರುವಿಕೆಯನ್ನು ನಿಲ್ಲಿಸಿ, ಆಡಳಿತೆಯಲ್ಲಾಗುತ್ತಿರುವ ವಿನಾ ಕಾರಣ ಖರ್ಚನ್ನು ಕಡಿಮೆ ಮಾಡಿದ್ದಾದರೆ ಸರಕಾರ ಕೈಗೊಳ್ಳಬೇಕೆಂದಿರುವ ಕ್ರಮಗಳಿಗೆ ಪರಿಹಾರ ಸಿಗಬಹುದು. ಸಾರಿಗೆ ಸಂಸ್ಥೆಯನ್ನು ಖಾಸಗೀಕರಣಗೊಳಿಸಬೇಕೆಂಬ ನೀತಿಯನ್ನು ಬಿಟ್ಟುಕೊಟ್ಟು, ರಾಷ್ಟ್ರೀಕೃತ ದಾರಿಗಳಲ್ಲಿ ಖಾಸಗಿ ಬಸ್ಸುಗಳು, ಮಿನಿ ಬಸ್, ಮೆಟಡೋರ್‌ಗಳು ರಾಜಾರೋಷವಾಗಿ ಓಡಾಡುತ್ತಿರುವುದನ್ನು ನಿಲ್ಲಿಸಿ, ಸರಿಯಾಗಿ ಸಾರಿಗೆ ಸಂಸ್ಥೆಯನ್ನು ನಡೆಸುತ್ತೇವೆಂದು ಸಾರಿಗೆ ಕಾರ್ಮಿಕರನ್ನೂ, ಜನರನ್ನೂ ವಿಶ್ವಾಸದಲ್ಲಿ ತೆಗೆದುಕೊಂಡರೆ ಬೆಲೆ ಏರಿಕೆಯ ಪ್ರಶ್ನೆಯೇ ಉಂಟಾಗುವುದಿಲ್ಲ. ಸರ್ವ ವಿದ್ಯುತ್ ಬಳಕೆದಾರರಿಗೆ ರೂ 1300 ಠೇವಣಿ ಸಂಗ್ರಹಿಸುವ ಅವಶ್ಯಕತೆಯೂ ಇಲ್ಲ.

ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ಸಮಸ್ಯೆಗಳಿಂದಾಗಿ ಕೆಲವು ಸಲ ಕೆಲವು ವಸ್ತುಗಳ, ಕೆಲವು ರಂಗಗಳಲ್ಲಿ ಬೆಲೆ ಹೆಚ್ಚಿಸುವಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸ್ವಲ್ಪ ಬೆಲೆ ಹೆಚ್ಚಿಸಿದರೆ ಅದು ಎಲ್ಲರಿಗೂ ಅರ್ಥವಾಗುವ ವಿಷಯ. ಅದು ಬಿಟ್ಟು ದುರಾಡಳಿತೆ, ಅದಕ್ಷತೆ, ಆಡಳಿತದ ದುರುಪಯೋಗ, ಭ್ರಷ್ಟಾಚಾರ, ಅಸ್ಥಿರ ನೀತಿಗಳಿಂದಾಗಿ ಅನುಭವಿಸಬೇಕಾಗಿ ಬಂದಿರುವ ನಷ್ಟವನ್ನು ತುಂಬಿಕೊಳ್ಳುವ ಸಲುವಾಗಿ ಬೆಲೆ ಹೆಚ್ಚಿಸಬೇಕು. ಸಾರಿಗೆ ಪ್ರಯಾಣ ತುಟ್ಟಿಮಾಡಬೇಕು. ಠೇವಣಿಗಳನ್ನು ಸಂಗ್ರಹಿಸಬೇಕೆಂಬ ನೀತಿ ಎಂದಿಗೂ ಒಪ್ಪಿಗೆಯಾಗದ ನೀತಿಯಾಗಿರುವುದರಿಂದ ಜೆ.ಹೆಚ್.ಪಟೇಲ ಸರಕಾರ ತನ್ನ ಜನವಿರೋಧಿ ನೀತಿಯನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತದೆ.

ಹತ್ತು ವರ್ಷಗಳ ಹಿಂದಿನ ಕೂಲಿ ಸಾಕೇ ಎಂದು ಕೇಳಿದ್ದಕ್ಕೆ ಹಂಚು ಕಾರ್ಮಿಕರನ್ನೇ ಜೈಲಿಗಟ್ಟಿದರು!

ಹಂಚು ಕೆಲಸಗಾರರಿಗೆ ಕಳೆದ ಹತ್ತು ವರ್ಷಗಳಿಂದಲೂ ಕನಿಷ್ಟ ವೇತನ ಪುನರ್ವಿಮರ್ಶೆ ಮಾಡದೆ ಸರಕಾರ ಕಾರ್ಮಿಕರಿಗೆ ಅನ್ಯಾಯವೆಸಗಿದೆ. ಬೆಲೆಯೇರಿಕೆಯ ಈ ದಿನಗಳಲ್ಲಿ ಕನಿಷ್ಟ ವೇತನ ಪುನರ್ವಿಮರ್ಶೆ ಆಗಬೇಕೆಂದು ಸರಕಾರಕ್ಕೆ ಹಲವಾರು ಮನವಿಗಳನ್ನು ಅರ್ಪಿಸಿದರೂ ಸರಕಾರ ಕಾಯಿದೆ ಬದ್ಧವಾಗಿ ಕಾಲಮಿತಿಯಲ್ಲಿ ಕನಿಷ್ಟ ವೇತನ ನಿರ್ಧರಿಸಲು ನಿರಾಕರಿಸುತ್ತಿರುವುದನ್ನು ಖಂಡಿಸಿ, ಕನಿಷ್ಟ ವೇತನದ ಪುನರ್ವಿಮರ್ಶೆ ಕೂಡಲೇ ಆಗಬೇಕೆಂದು ಒತ್ತಾಯಿಸಲು ದಕ್ಷಿಣ ಕನ್ನಡ ಜಿಲ್ಲೆಯ ಸಾವಿರಾರು ಹಂಚಿನ ಕೆಲಸಗಾರರು ೨೦.೧.೯೭ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಶಾಂತಿರೀತಿಯ ಪ್ರತಿಭಟನೆ ವ್ಯಕ್ತಪಡಿಸಿದರು. ಪಿಕೆಟಿಂಗ್ ನಡೆಸಿದರು. ಕಷ್ಟದಲ್ಲಿರುವ ಹಂಚು ಕಾರ್ಮಿಕರ ನ್ಯಾಯಯುತ ಬೇಡಿಕೆ ಕುರಿತು ಸಹಾನುಭೂತಿ ತೋರಿಸದೆ ನೂರಾರು ಮಂದಿಯನ್ನು ಬಂಧಿಸಿರುವುದನ್ನು ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಬಂಧಿತ ಕಾರ್ಮಿಕರನ್ನೆಲ್ಲ ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತದೆ.

ಹಂಚು ಕೆಲಸಗಾರರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಲು ಜನವರಿ ೨೨ ರಂದು ದ.ಕ. ಜಿಲ್ಲೆಯ ಹಂಚಿನ ಕಾರ್ಮಿಕರಲ್ಲದೆ ಇತರ ಕಾಮಿಕರೂ ಮುಷ್ಕರ ಆಚರಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೃಹತ್ ಪ್ರತಿಭಟನಾ ಮತ ಪ್ರದರ್ಶನ ನಡೆಸಿದರು. ಅದರ ಪರಿಣಾಮವಾಗಿ ಜಿಲ್ಲಾಧಿಕಾರಿಗಳೂ, ಪೋಲೀಸ್ ಅಧಿಕಾರಿಗಳು ಕ್ಷಮೆ ಕೇಳುವ ಪರಿಸ್ಥಿತಿಉಂಟಾಯಿತು. ಬಂಧಿತರನ್ನು ಬಿಡುಗಡೆ ಮಾಡಬೇಕಾಯಿತು. ಅವರ ಮೇಲೆ ಹಾಕಿದಖಟ್ಲೆಯನ್ನು ಹಿಂತೆಗೆಯುವ ಆಶ್ವಾಸನೆ ನೀಡಬೇಕಾಯಿತು. ಹಂಚು ಕೆಲಸಗಾರರ ಮುಖಂಡರಾದ ಅಬ್ರಾಹಂ ಕರ್ಕಡ, ಶಂಕರ್, ಮೂಸಬ್ಬ, ಸಿಪಿಐ(ಎಂ) ಮುಖಂಡರಾದ ಕೆ.ಆರ್.ಶ್ರಿಯಾನ್, ಪಿ.ರಾಮಚಂದ್ರರಾವ್ ಮೊದಲಾದವರು ಹೋರಾಟದ ಮುಖಂಡತ್ವವನ್ನು ವಹಿಸಿದ್ದರು. ೨೨ ರಂದು ಡಿ.ಸಿ. ಕಚೇರಿಯ ಮುಂದೆ ನೆರೆದಿದ್ದ ೨೦೦೦ಕ್ಕೂ ಮೇಲ್ಪಟ್ಟ ನೆರೆದಿದ್ದ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡಿದರು.

ಮಂಗಳೂರಿನಲ್ಲಿ ಮತ ಪ್ರದರ್ಶನ ಮಾಡುತ್ತಿದ್ದಾಗ ಪೋಲೀಸರು ಹೆಂಚಿನ ಕಾರ್ಮಿಕರ ಮೇಲೆ ಲಾಟಿ ಚಾರ್ಜ್ ಮಾಡಿ ಮುನ್ನೂರಕ್ಕೂ ಹೆಚ್ಚು ಜನರನ್ನು ಬಂಧಿಸಿರುವುದನ್ನು ಸಿಐಟಿಯು ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ತ್ಯಾವಶ್ಯಕ ಅಹಾರ ದಾನ್ಯಗಳು ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚುತ್ತಿರುವಾಗ, ಕನಿಷ್ಟ ವೇತನ ಕಾಯಿದೆಗನುಸರಿಸಿ ವೇತನ ವಿಮರ್ಶೆ ಮಾಡದೆ, ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುವ ಜೆ.ಹೆಚ್.ಪಟೇಲರ ಸರಕಾರದ ನೀತಿಯನ್ನು ಎಲ್ಲಾ ಕಾರ್ಮಿಕ ಸಂಘಟನೆಗಳು ಖಂಡಿಸಬೇಕೆಂದು, ಬಂಧಿತ ಕಾರ್ಮಿಕರನ್ನು ಬಿಡುಗಡೆ ಮಾಡಬೇಕೆಂದು ಸರಕಾರದ ಮೇಲೆ ಒತ್ತಾಯ ತರಬೇಕೆಂದು ಸಿಐಟಿಯು ರಾಜ್ಯ ಸಮಿತಿ ಎಲ್ಲಾ ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡಿದೆ. □

ಮತ್ತೆ ಬೆಲೆ ಹೆಚ್ಚಳದ ಕ್ರಮ: ಸಿಪಿಐ(ಎಂ) ಖಂಡನೆ

ಕೆಎಸ್‌ಆರ್‌ಟಿಸಿಯ ಪ್ರಯಾಣ ದರ, ವಿದ್ಯುತ್ ದರ ಹೆಚ್ಚಿಸುವ, ನೀರಿಗೆ ತೆರಿಗೆ ವಿಧಿಸುವ ರಾಜ್ಯ ಸರಕಾರದ ನೀತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ವಿಧಾನಸಭೆಯ ಬಜೆಟ್ ಅಧಿವೇಶನ ಸೇರುವ ಮುಂಚೆ ಜನರಿಗೆ ನೇರವಾಗಿ ಸಂಬಂಧಪಟ್ಟ ಪ್ರಯಾಣ, ವಿದ್ಯುತ್, ನೀರು, ಮೊದಲಾದ ವಿಷಯಗಳಲ್ಲಿ ಜನಾಭಿಪ್ರಾಯ ಸಂಗ್ರಹಿಸದೆ ಆಡಳಿತಾತ್ಮಕವಾಗಿ ದರ ಹೆಚ್ಚಿಸುವ ಕ್ರಮ ಸರಿಯಲ್ಲ ಅದು ಜನವಿರೋಧಿಯಾದ ಕ್ರಮ ಖಂಡನೀಯ ಎಂದಿದೆ. ಕೆಇಬಿಯವರು ಪ್ರತಿಯೊಬ್ಬರಿಂದ ಡಿಪಾಜಿಟ್ ರೂಪದಲ್ಲಿ ರೂ. ೧೩೦೦ ಸಂಗ್ರಹಿಸುತ್ತಿರುವುದೂ ಖಂಡನೀಯ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಈ ಜನವಿರೋಧಿ ನೀತಿಗಳನ್ನು ಕೈಬಿಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಇನ್ನು ಮುಂದೆ ಸಮ್ಮಿಶ್ರ ಸರಕಾರಗಳದ್ದೇ ರಾಜ್ಯವಾದರೆ ಪ್ರಧಾನಿಗಳ ಪ್ರವಾಸಗಳ ಈ ಭರಾಟೆ ಏಕೆ?

ಪುಟ 3

ನೀರು ಹರಿದಿದೆ ನೋಡಿ, ನಿಮ್ಮ ಅಂಗಳದ ರಂಗೋಲಿ ಕೆಳಗೆ!

ಪುಟ 2

ನೇತಾಜಿ ಸುಭಾಶ್ ಚಂದ್ರ ಬೋಸ್ ಜನ್ಮಶತಾಬ್ಧಿ ಸಂದರ್ಭದಲ್ಲೊಂದು ನೆನಪು



ಪುಟ 2

ಬಂಡವಾಳ ದೊರೆಗಳಿಗೆ ರಕ್ಷೆ ಜನಸಾಮಾನ್ಯರಿಗೆ ಶಿಕ್ಷೆ!

ಪುಟ 5

ಎಂದಿನಂತೆ ಈ ವರ್ಷ 'ಐಕ್ಯರಂಗ'ದ ಹೊಸ ವರ್ಷದ ಸಂಚಿಕೆಯಲ್ಲಿ. ಹೊಸ ವರ್ಷದ ಕ್ಯಾಲೆಂಡರ್ ಕಾಣಬರಲಿಲ್ಲವೇಕೆ ಎಂದು ಹಲವಾರು ಓದುಗರು ಪ್ರಶ್ನಿಸುತ್ತಿದ್ದಾರೆ, ಕೆಲವರು ಪತ್ರ ಬರೆದಿದ್ದಾರೆ. 'ಐಕ್ಯರಂಗ'ದಂತಹ ಜನಸಾಮಾನ್ಯರ ಪತ್ರಿಕೆಯ ಹಣಕಾಸಿನ ಪರಿಸ್ಥಿತಿಯಿಂದಾಗಿ ಇದನ್ನು ಪ್ರಕಟಿಸಿರಲಿಲ್ಲ. ಆದರೆ ಈಗ ಓದುಗರ ಕೇಳಿಕೆಯಂತೆ ಒಂದು ಚಿಕ್ಕ ಕ್ಯಾಲೆಂಡರನ್ನು ಒಂದು ತಿಂಗಳು ತಡವಾಗಿ ಪ್ರಕಟಿಸುತ್ತಿದ್ದೇವೆ. ಸ್ವಾಭಾವಿಕವಾಗಿಯೇ ಇದು ನಮ್ಮ ಸ್ವಾತಂತ್ರ್ಯದ ಚಿನ್ನದ ಹಬ್ಬದ ನೆನಪಿನಲ್ಲಿ, ನಮ್ಮ ಓದುಗರ ಬಳಗ ವಿಸ್ತಾರಗೊಂಡು ಮುಂದಿನ ವರ್ಷ ಉತ್ತಮ ತಾಂತ್ರಿಕ ಗುಣ ಮಟ್ಟದ ಕ್ಯಾಲೆಂಡರು ಕೊಡಲು ಸಾಧ್ಯವಾಗಬಹುದು ಎಂಬ ನಿರೀಕ್ಷೆಯಿಂದ.

ಪುಟ 6

ಸಿಪಿಐ(ಎಂ)ನ ರಾಜ್ಯವ್ಯಾಪೀ ಪ್ರಚಾರಾಂದೋಲನ - ಜನವರಿ ೧೬-೩೦, ೧೯೯೭

● ಮನೆ-ಮನೆ ಪ್ರಚಾರ ● ಬೀದಿ ಬದಿ ಸಭೆಗಳು ● ಹುತಾತ್ಮ ದಿನ ಜ.೩೦ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು ●

ಖಾಸಗಿಯವರ ಝಣ ಝಣ ಕಾಂಚಾಣದ ಚಮತ್ಕಾರ

ನೀರು ಹರಿಯಲಿದೆ ನೋಡಿ. ನಿಮ್ಮ ಅಂಗಳದ ರಂಗೋಲಿ ಕೆಳಗೆ!

ಎಸ್.ವೈ.ಗುರುಶಾಂತ್

ಒಂದು ದಿನ, ಬೆಳಗು. ರೈತರಿಗೆ ಅದೆಷ್ಟು ಸಂತಸ. 'ಭೂಮಿ ಕೊಡಿ, ನೀರು ಕೊಡಿ, ದುಡಿಯುವ ಕೈಗೆ ಕೆಲಸ ಕೊಡಿ' ಅಂತ ಘೋಷಣೆಗಳನ್ನು ಕೂಗಿ, ಸತ್ಯಾಗ್ರಹ ನಡೆಸಿದ ಆರೇಳು ವರ್ಷಗಳ ಹಿಂದಿನ ನೆನಪುಗಳು. ಬೆಳ್ಳಂಬೆಳಿಗ್ಗೆ ಸೂರ್ಯ ಹುಟ್ಟುವ ಮುಂಚೆ ಧರ್ಮಸಾಗರ, ಗಾದಿಗನೂರು ಗ್ರಾಮಗಳ ಅಂಗಳದಲ್ಲಿ ಭರಭರನೆ ಸದ್ದು ಮಾಡುವ ಯಂತ್ರಗಳು. ಟ್ರಾಕ್ಟರ್‌ಗಳೇ.... ಅಲ್ಲಲ್ಲ. ಚಾಲಕ ಹೇಳಿದ 'ಇದು ಕಾಲುವೆ ತೋಡುವ ಮಶೀನು'. ಹೌದಾ! ಕಾಲುವೆ.... ನಮ್ಮೂರಿಗೆ ಕಾಲುವೆಯಾ! ಅಂದ್ರೆ ಡ್ಯಾಮಿನಿಂದ ನೀರು ಬರುತ್ತಾ! ಜೊತೆಗಿದ್ದ ಮೇಸ್ತ್ರಿ ಹೇಳಿದ ಹೌದು ತುಂಗಭದ್ರಾ ನದಿಯಿಂದ-ಹೊಸಪೇಟೆ ಹಂಗೆ ತೋರಣಗಲ್ಲುವರೆಗೂ ತೋಡಲಾಗುವುದು ಕಾಲುವೆ. ನೀರು ಬರುತ್ತೆ!. ಇಲ್ಲಿಂದಲೇ ಹರಿಯುತ್ತೆ. ಇಷ್ಟೊಂದು ಸ್ಪಷ್ಟವಾದ ಮಾತು ಕೇಳಿದ ಮೇಲೆ ಮೈ ಪುಳಕಗೊಂಡಿತು. ಬಹು ದಿನಗಳ ಅನುದಿನದ ಕನಸಿಗೆ ರೆಕ್ಕೆ ಪುಕ್ಕ ಮೂಡಿತು. ಹೂತಿದ ತುಂಬೆಲ್ಲಾ ನೀರು ಮೈ ಕೈಗೆಲ್ಲಾ ಕೆಸರು. ಕೆಸರಾದ ಮೇಲಲ್ಲವೇ ಬಾಯಿಗೆ ಮೊಸರು..... ಕಸುವು ಹಾಕಿ ಫಸಲು ಬೆಳೆಯುವವರಿಗೆ ಹೆಚ್ಚು ದುಡಿಮೆಯಲ್ಲಿನ ಸಂಭ್ರಮವಲ್ಲದೇ ಮತ್ತೇನು ಕಾಣಲು ಸಾಧ್ಯ!

ಆದರೂ ಒಳ ಮನಸ್ಸು ಎಚ್ಚರಿಸಿತು. ಎಷ್ಟು ಬಾರಿ ಶೇಕ್ ಪೀರ ಮಹ್ಮದ್‌ನ ವ್ಯಾಪಾರೀ ಕನಸಿನ ಗಡಿಗೆ ಒಡೆದು ಹೋಗಿಲ್ಲ! ಅನುಭವ ಕೇಳಿತು. "ಅಲ್ಲಪ್ಪ ಈ ಕಾಲುವೆ ನೀರು ನಮ್ಮ ಹೊಲಕ್ಕಾ?" ಹೌದೆಂದು ಉತ್ತರ ಬರಲಿ ಎಂದು ಹರಕೆ ಹೊರುತ್ತ ರೈತರು ಕೇಳಿದರು. ಈ ತೋರುವ ಮಿಷನ್ ಡ್ರೈವರ್ ಪಕ್ಕದ ಊರಿನ ಯಲ್ಲಪ್ಪ. ರೈತರ ಮಾತಿಗೆ ಬ್ರೇಕ್ ಹಾಕಿದ "ಇಲ್ಲಣ್ಣೋ ಈ ನೀರು ಸ್ಟೀಲು ಫ್ಯಾಕ್ಟರಿಗೆ. ಜಿಂದಾಲ್ ಫ್ಯಾಕ್ಟ್ರಿಗೆ". ಈ ಮಾತು ಕೇಳಿದವರ ಮುಖ ಕಪ್ಪಿಟ್ಟಿತು. ಸರ್ಕಸ್‌ನ ತೊಟ್ಟಿಯಲ್ಲಿ ಮೇಲಕ್ಕೆ ಒಯ್ದು ಬಿಸಾಕಿದಂತಾಯಿತು. 'ಹೌದಾ!' ಆದರೆ ಆಘಾತ' ಅಷ್ಟು ಸುಲಭವಾಗಿ ಅರಗಿಸಿಕೊಳ್ಳುವಂತೆ ಇರಲಿಲ್ಲ. ಏನು ಮಾಡಬೇಕೋ ತಿಳಿಯಲಿಲ್ಲ. ನಮ್ಮ ಅಂಗಳ ತೋಡಬೇಡಿರೆಂದು ತಾಕೀತು ಮಾಡಿದರು. ಆದರೆ ಕೇಳಬೇಕಲ್ಲ. ಸರಕಾರದ ಆರ್ಡರ್ರೇ ಇರುವಾಗ ಇವರ ಮಾತೇನು? ಹಾಳುಗಸ ಬಳಿದು ರಂಗೋಲಿ ಇಕ್ಕುವ ಮೊದಲೇ ಮಿಶನ್ ತೋಡತೊಡಗಿತು. ಸಮಾಧಾನಕ್ಕೆ ಮೇಸ್ತ್ರಿ ಹೇಳಿದ 'ತೋಡಿದ ಮೇಲೆ ಪೈಪ್ ಹಾಕಿ ಮುಚ್ಚುತ್ತೇವೆ. ಮತ್ತೆ ಅಂಗಳದಲ್ಲಿ ರಂಗೋಲಿ ಹಾಕಬಹುದು!'.

ಇಂದು ಹೊಸಪೇಟೆಯಿಂದ ತೋರಣಗಲ್ಲಿನವರೆಗೂ ರಸ್ತೆಯುದ್ದಕ್ಕೂ ಕಾಲುವೆ ತೋಡಲಾಗುತ್ತಿದೆ. ಬೃಹದಾಕಾರದ ಪೈಪಗಳನ್ನು ಉದ್ದಕ್ಕೂ ಇಳಿಸಲಾಗಿದೆ. ಹಗಲು ರಾತ್ರಿಯೆನ್ನದೆ ಯಂತ್ರಗಳೊಂದಿಗೆ ನಾಲ್ಕಾರು ಜನ ಕೆಲಸಗಾರರು ದುಡಿಯುತ್ತಲೇ ಇದ್ದಾರೆ. ಒಂದೆರಡು ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳಲಿದೆ.

ಹಿಂದೆ ಜನತೆ ಪ್ರಾಂತ ರೈತ ಸಂಘ, ಡಿವೈಎಫ್ಐ ನೇತೃತ್ವದಲ್ಲಿ ಚಳುವಳಿ ಹೂಡಿ ತಮ್ಮ ಭೂಮಿಗೆ ನೀರು ಬೇಕು ಎಂದು ಕೇಳಿದ್ದಾಗ, ಸಿಕ್ಕ ಉತ್ತರ, "ಇಲ್ಲಿ ಭೂಮಿ ಸಮತಟ್ಟಾಗಿಲ್ಲ. ನೀರು ಹರಿಯುವುದು ದುಸ್ತರ!" ಮಂತ್ರಿಗಳನ್ನು ಇನ್ನೂ ಒತ್ತಾಯಿಸಿದಾಗ ಹೇಳಿದ್ದು 'ಡ್ಯಾಂನಲ್ಲಿ ಇರುವ ನೀರೇ ಸಾಕಾಗುತ್ತಿಲ್ಲ ನಿಮಗೆಲ್ಲಿ?' ಕಣ್ಣೆದುರು ಇಷ್ಟೆಲ್ಲಾ ನಡೆಯುತ್ತಿರುವಾಗ ಈ ಮಾತುಗಳ ಮೋಸ ಅರ್ಥವಾಗುತ್ತಿದೆ. ಜಿಂದಾಲ್ ಉಕ್ಕು ಕಾರ್ಖಾನೆಯ ಝಣ ಝಣ ಕಾಂಚಾಣವು "ಭೂಮಿಯನ್ನು ಸಮತಟ್ಟುಗೊಳಿಸಿಬಿಟ್ಟಿದೆ. ತುಂಗಭದ್ರೆಯ ಒಡಲು ಹಿಗ್ಗಿ ನೀರಿನ ಮಟ್ಟವನ್ನೂ ಮೇಲೇರಿಸಿದೆ!".

ಬಳ್ಳಾರಿ ಜಿಲ್ಲೆ ಕೈಗಾರೀಕರಣಕ್ಕೆ ತೆರೆದುಕೊಳ್ಳುತ್ತಿದೆ. 'ವಿಜಯನಗರ ಉಕ್ಕು ಕರ್ನಾಟಕದ ಹಕ್ಕು' ಎಂದು ಹೋರಾಡಿದ, ಧ್ವನಿಗೂಡಿಸಿದ ಎಲ್ಲರೂ ಬೆರಗಾಗುವಂತೆ ಕೈಗಾರೀಕರಣದ ಯೋಜನೆಗಳು ಸಿದ್ಧಗೊಂಡಿವೆ. ನಿರ್ಮಾಣದ ಹಾದಿಯಲ್ಲಿವೆ. ಆದರೆ ಅವೆಲ್ಲಾ ಖಾಸಗೀ ಕ್ಷೇತ್ರದಲ್ಲಿ! ಸರಕಾರದ ಪ್ರಕಟಣೆಯಂತೆ 16000 ಕೋಟಿ ಕೈಗಾರಿಕಾ ಬಂಡವಾಳ ಹರಿದು ಬರಲಿದೆ. ಅದರ ವಿವಿಧ ಮಗ್ಗಲು ವಿಶ್ಲೇಷಿಸುವುದೆಂದರೆ ಅದೊಂದು ಮಹಾ ಸಂಪುಟವೇ ಆದೀತು.

ಇದೀಗ ನಮ್ಮ ಮುಂದಿರುವ ಪ್ರಶ್ನೆಗಳು ಹೀಗೆ. ಭೂಮಿಗೆ ನೀರು ನಿರಾಕರಿಸಿದ ವಿವಿಧ ಸರಕಾರಗಳು ಇಷ್ಟೊಂದು ಕ್ಷಿಪ್ರವಾಗಿ ನೀರು ನೀಡುತ್ತಿರುವುದೇಕೆ? ತುಂಗಭದ್ರೆಯಲ್ಲಿ ನೀರು ಹೆಚ್ಚು ಶೇಖರಗೊಳ್ಳದಿರುವಾಗ, ಅಂತರ್‌ಜಲ ಕುಸಿದಿರುವಾಗ ಈಗಾಗಲೇ ನೀರಾವರಿಗೆ ಒಳಪಟ್ಟಿರುವ ಭೂಮಿಯ ಪಾಡೇನು?

ಸ್ವಲ್ಪ ಹೀಗೆ ಒರಟಾಗಿ ಯೋಚಿಸೋಣ. ಬಳ್ಳಾರಿ ಜಿಲ್ಲೆಯಲ್ಲಿ ಕೃಷಿಗೆ ಒಳಪಟ್ಟಿರುವ ಭೂಮಿಯಲ್ಲಿ ಬಳ್ಳಾರಿ ತಾಲೂಕು ಶೇ. 53.79(ಅತೀ ಹೆಚ್ಚು), ಎರಡನೇ ಸ್ಥಾನ ಹೊಸ ಪೇಟೆ ತಾಲೂಕು ಶೇ. 51.30,ಮೂರನೇ ಸ್ಥಾನ ಶಿರುಗುಪ್ಪ ಶೇ. 37.97 ಅತೀ ಕಡಿಮೆ ಸಂಡೂರು ತಾಲೂಕು ಶೇ. 10.87. ನೀರುಣ್ಣುವ ಚಿಕ್ಕ ಜಮೀನು 181434 ಹೆಕ್ಟೇರ್ ಇದೆ. ಇದರಲ್ಲಿ ಬಳ್ಳಾರಿ ತಾಲೂಕು 72998 ಹೆಕ್ಟೇರ್ ಇದ್ದರೆ ಎರಡನೇ ಸ್ಥಾನ ಶಿರುಗುಪ್ಪ 28172 ಹೆಕ್ಟೇರ್. ಈ ಪ್ರದೇಶಗಳಲ್ಲಿ ಭೂಮಿಗೆ ಈಗಿರುವ ನೀರು ಸಾಕಾಗದೆ ಮಳೆಯೂ ಬಾರದೆ ಬೆಳೆ ಒಣಗಿ ರೈತರು ಸಂಕಷ್ಟಕ್ಕೆ ಸಿಗುತ್ತಿರುವುದು ವರ್ಷಂಪ್ರತೀ ನಡೆದೇ ಇದೆ. ಹೀಗಿರುವಾಗ ಬಳ್ಳಾರಿ ಜಿಲ್ಲೆಗೆ ಬರುತ್ತಿರುವ ಕೈಗಾರಿಕೆಗಳಲ್ಲಿ ಉಕ್ಕು ಉತ್ಪಾದನೆಗೆ, ನಾಗರೀಕ ಸೌಲಭ್ಯಗಳಿಗೆ ಬೇಕಾಗುವ ನೀರಿನ ಪ್ರಮಾಣ ಎಷ್ಟು? ಸರಿದೂಗಿಸುವ ದಾರಿಯೇನು?

ಒಂದು ಮಿಲಿಯ ಟನ್ ಉಕ್ಕು ಉತ್ಪಾದನೆಗೆ 36 ಮಿಲಿಯ ಲೀಟರ್ ನೀರು ಬೇಕು. ಈಗಿನ ಅಂದಾಜಿನಂತೆ ವರ್ಷಕ್ಕೆ ಕನಿಷ್ಟ 6.6 ಮಿಲಿಯನ್ ಟನ್ ಉಕ್ಕು ಉತ್ಪಾದನೆಗೊಳ್ಳಲಿದೆ. ಅಂದರೆ ಕನಿಷ್ಟ 237.6 ಮಿಲಿಯನ್ ಲೀಟರ್ ನೀರು ಉತ್ಪಾದನೆಗೇ ಬೇಕು. ಈಗಾಗಲೇ ಕಾರ್ಖಾನೆಯ ನಿರ್ಮಾಣದ ಹಂತದ ಕೆಲಸಗಳಿಗಾಗಿ ತುಂಗಭದ್ರಾ ನದಿಯಿಂದ 3 ಟಿಎಂಸಿ ನೀರು ಬಳಕೆ ಆಗುತ್ತಿದೆ. 2005ರ ಹೊತ್ತಿಗೆ ಎಲ್ಲಾ ಉದ್ಯೋಗಿಗಳ ಪ್ರಮಾಣ 70 ಸಾವಿರ ಎಂಬ ಅಂದಾಜು. ಉದ್ಯೋಗಿಗಳಿಗೆ ಮಾತ್ರವೇ ಪ್ರತಿದಿನ 8602748 ಲೀಟರ್ ನೀರು ಬೇಕಾಗುವ ಅಂದಾಜಿದೆ. ಅವರ ಕುಟುಂಬ ಸೇರಿದರೆ ಕನಿಷ್ಟ ಮೂರರಷ್ಟು. 2015ರ ಹೊತ್ತಿಗೆ ಬರೀ ಬಳ್ಳಾರಿ ನಗರವೇ 5 ಲಕ್ಷ ಜನಸಂಖ್ಯೆಯನ್ನು ಹೊಂದುವ ಅಂದಾಜಿದೆ. ಕುಡಿಯುವ ನೀರಿನ ಸದ್ಯದ ಸ್ಥಿತಿ. ಬಳ್ಳಾರಿ ತಲಾ ವ್ಯಕ್ತಿಗೆ 86 ಲೀಟರ್. ಅತೀ ಕಡಿಮೆ ಹೊಸಪೇಟೆಯ ಅನುದಾನಿತ ಪ್ರದೇಶ. ಕೇವಲ 14 ಲೀ. ಇದನ್ನು ಹೇಗೆ ಸರಿಪಡಿಸುವುದು.

ನಮ್ಮ ಪ್ರಶ್ನೆ ಹೊಸದಾಗಿ ಯಾವುದೇ ಜಲ ಸಂಪನ್ಮೂಲಗಳಿಲ್ಲದೆ ಇಷ್ಟೊಂದು ನೀರಿನ ಬಳಕೆ ಸರಿದೂಗಿಸುವುದು ಹೇಗೆ? ಸದ್ಯದ ಕೃಷಿ ರಂಗ ವಿಪರೀತ ವಾದ ಹಾನಿಗೊಳಪಡುವುದಿಲ್ಲವೇ? ಪರ್ಯಾಯವೇನು? ಹೊಸ ಸಮಸ್ಯೆಗಳಿಂದ ಹಳೆಯ ಸಮಸ್ಯೆಗಳನ್ನು ಅಪ್ರಸ್ತುತಗೊಳಿಸುವ ಉತ್ತರ ಆಳುವವರಿಂದ. "ಜನ ಎಚ್ಚೆತ್ತುಕೊಳ್ಳಬೇಕಿದೆ. ಅಭಿವೃದ್ಧಿ ಬಯಸುತ್ತಾ ಅದು ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ಕ್ರಮ ವಹಿಸಬೇಕಾಗಿದೆ.

೧೯೪೫ರಲ್ಲಿ ಎರಡನೇ ಮಹಾಯುದ್ಧ ಮುಗಿದ ನಂತರ ದೇಶದಲ್ಲೆಡೆ ಭುಗಿಲೆದ್ದ ಉತ್ಕ್ರಾಂತಿಗಳು, ಅದರಲ್ಲಿ ಕಾರ್ಮಿಕರು, ರೈತರು, ಸೈನಿಕರು ಮತ್ತಿತರರ ಪಾತ್ರ ಬ್ರಿಟಿಷರನ್ನು ನಡುಗಿಸಿಬಿಟ್ಟಿತು. ೧೯೪೭ರಲ್ಲಿ ಅವರು ಕಾಂಗ್ರೆಸ್‌ಗೆ ಅಧಿಕಾರ ಹಸ್ತಾಂತರ ಮಾಡುವಂತಹ ಒತ್ತಡ ನಿರ್ಮಿಸಿದವು. ನೇತಾಜಿ ಸುಭಾಷ್ ಚಂದ್ರ ಬೋಸ್‌ರ ನೇತೃತ್ವದ 'ಆಝಾದ್ ಹಿಂದ್ ಸೇನೆ' ಬ್ರಿಟಿಷರ ಕೈವಶವಾದಾಗ ಅದರ ಸೇನಾಪತಿಗಳ ವಿಚಾರಣೆಗೆ ಬ್ರಿಟಿಷರು ಕೈ ಹಾಕಿದಾಗ ಅದರ ವಿರುದ್ಧವಾಗಿ ದೇಶಾದ್ಯಂತ ವ್ಯಕ್ತಗೊಂಡ ತೀವ್ರ ಪ್ರತಿಭಟನೆ ಅವುಗಳಲ್ಲೊಂದು. ಕಲ್ಕತ್ತಾ ಮುಂಬೈ, ಮಥುರಾ, ದಿಲ್ಲಿ ಮೀರತ್, ಪೇಶಾವರ್‌ಗಳಲ್ಲಿ ನಡೆದ ಪ್ರತಿಭಟನೆಗಳಲ್ಲಿ ಒಟ್ಟು ೭೦ಕ್ಕೂ ಹೆಚ್ಚು ಯುವಕರು ಬ್ರಿಟಿಷ್ ಗುಂಡುಗಳಿಗೆ ಬಲಿಯಾದರು. ಆದರೂ ಪ್ರತಿಭಟನೆಗಳು ನಿಲ್ಲಲಿಲ್ಲ. ನೇತಾಜಿಯವರ ಬಗ್ಗೆ ಅಂದಿನ ಯುವಜನರಲ್ಲಿದ್ದ ಆಕರ್ಷಣೆಯ, ಅಭಿಮಾನದ ಸಂಕೇತವಾಗಿತ್ತದು. ನೇತಾಜಿ ಮತ್ತು ಅವರ ಆಝಾದ್ ಹಿಂದ್ ಸೇನೆಯ ಸದಸ್ಯರ ದೇಶಪ್ರೇಮ, ಧೈರ್ಯ, ಸಾಹಸಗಳು ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಯುವ ಜನರಿಗೆ ಅತ್ಯಂತ ಸ್ಫೂರ್ತಿದಾಯಕವಾಗಿದ್ದವು. ದೇಶದ ವಿಭಜನೆಯಾಗಿ ನೇತಾಜಿಯವರು ಜರ್ಮನಿ-ಜಪಾನಿನ ಫ್ಯಾಸಿಸ್ಟರೊಂದಿಗೆ ಸೇರಿದ್ದನ್ನು ಖಡಾಖಂಡಿತವಾಗಿ ವಿರೋಧಿಸಿದವರಿಗೂ ಅವರ, ಅವರ ಸಹಯೋಗಿಗಳ ದೇಶಪ್ರೇಮ, ಜನಪ್ರೇಮದ ಬಗ್ಗೆ ಯಾವುದೇ ಸಂದೇಹವಿರಲಿಲ್ಲ. ನೇತಾಜಿಯವರ ಜನ್ಮ ಶತಾಬ್ದಿ ಆಚರಣೆ ಇದೇ ಜನವರಿ ೨೩ ರಿಂದ ದೇಶಾದ್ಯಂತ ಆರಂಭವಾಗಿದೆ. ಈ ಸಂದರ್ಭದಲ್ಲಿ ಅವರ ಸ್ಫೂರ್ತಿದಾಯಕ ಜೀವನದ ಒಂದು ನೆನಪಿನ ಮೊದಲ ಭಾಗ

ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಯುವಜನರ ಕಣ್ಮಣಿ ನೇತಾಜಿ ಸುಭಾಶ್ ಚಂದ್ರ ಬೋಸ್

ಕಲ್ಕತ್ತಾದಲ್ಲಿನ ಪ್ರೆಸಿಡೆನ್ಸಿ ಕಾಲೇಜ್ ಬ್ರಿಟಿಷ್ ಇಂಡಿಯಾದ ಅತ್ಯಂತ ಪ್ರಸಿದ್ಧವಾದ ಕಾಲೇಜು. 1916ರ ಜನವರಿಯಲ್ಲಿ ಇತಿಹಾಸ ಪ್ರಸಿದ್ಧ ಈ ಕಾಲೇಜಿನಲ್ಲಿ ಒಂದು ಪುಟ್ಟ ಘಟನೆ ಜರುಗಿತು. ಅಲ್ಲಿಯ ಇಂಗ್ಲಿಷ್ ಪ್ರಾಧ್ಯಾಪಕರಾದ ಇ.ಎಫ್. ಓಟನ್ ತಮ್ಮ ತರಗತಿಯ ಕೊಠಡಿಯ ಎದುರಿನ ಮೊಗಸಾಲೆಯಲ್ಲಿ ಗಲಾಟೆ ಮಾಡುತ್ತಿದ್ದ ಕೆಲವು ಅಮಾಯಕ ವಿದ್ಯಾರ್ಥಿಗಳನ್ನು ಥಳಿಸಿ ತಮ್ಮ ಬ್ರಿಟಿಷ್ ದರ್ಪವನ್ನು ಮೆರೆದರು. ಪ್ರಾಧ್ಯಾಪಕರ ಈ ಅನುಚಿತ ವರ್ತನೆಗೆ ಅವರು ಕ್ಷಮೆ ಕೇಳಬೇಕೆಂದು ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಓಟನ್‌ಗೆ ತಮ್ಮ ತಪ್ಪಿನ ಅರಿವಾಗಿ ಅವರು ವಿದ್ಯಾರ್ಥಿಗಳೊಂದಿಗೆ ಸ್ನೇಹದಿಂದ ವರ್ತಿಸಿ ವಿವಾದಕ್ಕೆ ಮುಕ್ತಾಯ ಹಾಡಬಯಸಿದರು. ಆದರೆ ಶ್ರೇಷ್ಠತೆಯ ಪಿತ್ತ ನೆತ್ತಿಗೇರಿದ ಕಾಲೇಜಿನ ಪ್ರಿನ್ಸಿಪಾಲರು ಅದಕ್ಕೊಪ್ಪದೆ ಮುಷ್ಕರದ ಮುಖಂಡರಿಗೆ ದಂಡ ವಿಧಿಸಿದರು. ತಾವು ಮಾಡದ ತಪ್ಪಿಗೆ ಅನ್ಯಾಯವಾಗಿ ದಂಡ ತೆರಬೇಕಾಗಿ ಬಂದ ವಿದ್ಯಾರ್ಥಿ ಮುಖಂಡರು ಪ್ರಿನ್ಸಿಪಾಲರ ಈ ಕ್ರಮದಿಂದ ಬೇಸತ್ತರು. ಅವರ ಅಸಮಾಧಾನದ ಹೊಗೆ ಆರುವ ಮುನ್ನವೇ ಇದೇ ರೀತಿಯ ಘಟನೆ ಮರುಕಳಿಸಿತು. ಓಟನ್ ಮೊದಲ ವರ್ಷದ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯೊಬ್ಬನ ಮೇಲೆ ಮತ್ತೆ ಕೈ ಮಾಡಿದರು. ಬ್ರಿಟಿಷ್ ಆಳ್ವಿಕೆಯಲ್ಲಿ ಪ್ರತಿಭಟನೆ ಮತ್ತು ಮುಷ್ಕರಗಳಂತಹ ಸಂವಿಧಾನತ್ಮಕ ಕ್ರಮಗಳಿಂದ ಪ್ರಯೋಜನ ವಿಲ್ಲವೆಂದು ಭಾವಿಸಿದ ಕೆಲ ವಿದ್ಯಾರ್ಥಿಗಳು ಕಾನೂನನ್ನು ಕೈಗೆತ್ತಿಕೊಂಡು ಓಟನ್‌ರವರಿಗೆ ಬಾಸುಂಡೆ ಬರುವಂತೆ ಹೊಡೆದರು. ಸರಕಾರ ಕೂಡಲೇ ಕಾಲೇಜನ್ನು ಮುಚ್ಚಿ, ದೊಂಬಿ ದಂಗೆಗಳ ಬಗ್ಗೆ ತನಿಖೆ ನಡೆಸಲು ಸಮಿತಿಯೊಂದನ್ನು ನೇಮಕ ಮಾಡಿತು. ಪ್ರಿನ್ಸಿಪಾಲರು ತಮ್ಮ ಅನುಚಿತ ವರ್ತನೆ ಯನ್ನು ಸಮರ್ಥಿಸಿಕೊಂಡರು. ಅವರು ತಮ್ಮ ಅಧಿಕಾರ ಬಿಡುವ ಮುನ್ನ ಈ ಎಲ್ಲಾ ಪ್ರತಿಭಟನೆಯ ಮುಖಂಡನನ್ನು ಕರೆಸಿ "ಈ ಕಾಲೇಜಿನಲ್ಲಿ ತುಂಬಾ ತೊಂದರೆ ಕೊಡುತ್ತಿರುವ ಹುಡುಗನೆಂದರೆ ನೀನೇ. ನಿನ್ನನ್ನು ಕಾಲೇಜಿನಿಂದ ಹೊರಗೆ ಹಾಕು ತ್ತೇನೆ" ಎಂದು ಗುಡುಗಿದರು. ಆ ವಿದ್ಯಾರ್ಥಿ ಮುಖಂಡ ಪ್ರಿನ್ಸಿಪಾಲರ ಬೆದರಿಕೆಗೆ ಅಲ್ಪವೂ ಅಂಜದೆ "ಥ್ಯಾಂಕ್ ಯೂ" ಎಂದು ದಿಟ್ಟ ತನದಿಂದ ಉತ್ತರಿಸಿ ಕಾಲೇಜಿನಿಂದ ಹೊರ ಬಿದ್ದ. ಹೀಗೆ ಹೊರಬಿದ್ದ ವಿದ್ಯಾರ್ಥಿ ಮುಖಂಡನೇ ನೇತಾಜಿ ಸುಭಾಶ್‌ಚಂದ್ರ ಬೋಸ್.

ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವದ ಗುಣಗಳನ್ನು ಮೈಗೂಡಿಸಿ ಕೊಂಡಿದ್ದ ಸುಭಾಶ್ ಜನಿಸಿದ್ದು 1897ರ ಜನವರಿ 23 ರಂದು ಒರಿಸ್ಸಾದ ಒಂದು ಪಟ್ಟಣವಾದ ಕಟಕ್‌ನಲ್ಲಿ. ತಂದೆ ಜಾನಕೀನಾಥ್‌ರು ವೃತ್ತಿಯಲ್ಲಿ ವಕೀಲ ರಾಗಿದ್ದರು. ಸಾಕಷ್ಟು ಉತ್ತಮ ಸ್ಥಿತಿಯಲ್ಲಿದ್ದ ಕುಟುಂಬದಲ್ಲಿ ಜನಿಸಿದ ಸುಭಾಶರು ಕಟಕ್‌ನ ಪ್ರಸಿದ್ಧ ಕಾಲೇಜುಗಳಾದ ಪ್ರಾಟೆಸ್ಟಂಟ್ ಯುರೋಪಿಯನ್ ಶಾಲೆ ಹಾಗೂ ರ‍್ಯಾವೆನ್ ಷಾ ಕೊಲಿಜಿಯೇಟ್ ಶಾಲೆಗಳಲ್ಲಿ ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿದರು. ಕ್ರೀಡಾ ಚಟುವಟಿಕೆಗಳಲ್ಲಿ ಅಷ್ಟೇನೂ ಆಸಕ್ತಿ ಹೊಂದಿರದ ಸುಭಾಷ್ ಓದಿನಲ್ಲಿ ಸದಾ ಮುಂದಿರುತ್ತಿದ್ದರು.

ಸ್ವಂತ ಮುಕ್ತಿಗಿಂತ........

ವಿದ್ಯಾರ್ಥಿ ಸುಭಾಶ್‌ರ ಮೇಲೆ ಗಾಢ ಪ್ರಭಾವ ಬೀರಿದವರು ರ‍್ಯಾವೆನ್‌ಷಾ ಶಾಲೆಯ ಮುಖ್ಯೋಪಾಧ್ಯಾಯರಾದ ವೇಣಿ ಮಾಧವ ದಾಸ್. ಸ್ವಾಮಿ ವಿವೇಕಾನಂದರ ಕೃತಿಗಳ ಅಧ್ಯಯನದಿಂದಲೂ ಅವರು ತುಂಬಾ ಪ್ರಭಾವಿತರಾದರು. ಸ್ವಂತ ಮುಕ್ತಿಗಾಗಿ ಪ್ರಯತ್ನಿಸುವುದಕ್ಕಿಂತ ಮಾನವ ಕುಲದ ಸೇವೆಗಾಗಿ ಇಡೀ ಬದುಕನ್ನೇ ಮೀಸಲಾಗಿಡುವುದೇ ಜೀವನದ ಉದ್ದೇಶವಾಗಿರಬೇಕೆಂಬ ತೀರ್ಮಾನಕ್ಕೆ ಅವರು ಬಂದರು. ಮಾನವ ಕುಲದ ಸೇವೆಯಲ್ಲಿ ದೇಶ ಸೇವೆಯೂ ಸೇರಿರುತ್ತದೆ ಎಂದು ಅವರು ಭಾವಿಸಿದರು. "ಪ್ರತಿ ಯೊಬ್ಬ ಭಾರತೀಯನೂ ನನ್ನ ಸೋದರ, ಭಾರತದ ಸ್ವಾತಂತ್ರ್ಯವು ಜನಶಕ್ತಿಯ ಉದಯವನ್ನು ಅವಲಂಬಿಸಿದೆ" ಎಂಬ ವಿವೇಕಾನಂದರ ವಾಣಿಯಿಂದ ತುಂಬಾ ಪ್ರಭಾವಿತರಾದರು.

ಯುವಜನರಿಂದ ಕೂಡಿದ ರಾಮಕೃಷ್ಣ ವಿವೇಕಾನಂದ ತಂಡದ ಸದಸ್ಯರಾಗಿ ಯೋಗ ಸಾಧನೆಗೆ ಸಂಬಂಧಿ ಸಿದ ಎಲ್ಲಾ ಬಗೆಯ ಗ್ರಂಥಗಳನ್ನು ಆಸಕ್ತಿಯಿಂದ ಓದಿದರು ಮತ್ತು ಗ್ರಾಮೀಣ ಪುನರ್‌ನಿರ್ಮಾಣ ಕಾರ್ಯದಲ್ಲಿ ಪ್ರತ್ಯಕ್ಷ ಅನುಭವವನ್ನು ಪಡೆದರು.

ಧಾರ್ಮಿಕ ಪರಿಹಾರ ಸಿಗಲಿಲ್ಲ

ಇಷ್ಟೆಲ್ಲಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೂ ಸುಭಾಷರು ತಮ್ಮ ಓದಿನಲ್ಲಿಯೂ ಅಷ್ಟೇ ಶ್ರದ್ಧೆಯನ್ನು ಹೊಂದಿದ್ದರು. ಅವರು ತಮ್ಮ ಮೆಟ್ರಿಕ್ಯೂಲೇಷನ್ ಪರೀಕ್ಷೆಯಲ್ಲಿ ಇಡೀ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ದ್ವಿತೀಯ ಸ್ಥಾನ ಗಳಿಸಿ ಉತ್ತೀರ್ಣರಾದರು. ಈ ಫಲಿತಾಂಶದಿಂದ ಉತ್ಸಾಹಗೊಂಡ ಜಾನಕೀನಾಥರು ತಮ್ಮ ಮಗನನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿಸಿದರು. ಕಾಲೇಜು ವಿದ್ಯಾರ್ಥಿಯಾದ ಸುಭಾಶ್‌ರಿಗೆ ಓದಿಗಿಂತ ಚರ್ಚಾಗೋಷ್ಠಿಗಳನ್ನು ಏರ್ಪಡಿ ಸುವುದು, ಪ್ರವಾಹ ಹಾಗೂ ಕ್ಷಾಮ ಸಂತ್ರಸ್ಥರಿಗೆ ಪರಿಹಾರ ನೀಡಲು ಧನ ಸಂಗ್ರಹಿಸುವುದು ಮತ್ತು ಪ್ರವಾಸ ಮಾಡುವುದರಲ್ಲೇ ಹೆಚ್ಚು ಆಸಕ್ತಿ.

ಒಂದೆಡೆ ಸಮೃದ್ಧಿ ಮತ್ತೊಂದೆಡೆ ಸಂಪೂರ್ಣ ದಾರಿದ್ರ್ಯ ಇವುಗಳಿಂದ ಕೂಡಿದ್ದ ಸಮಾಜ ವ್ಯವಸ್ಥೆಯಲ್ಲಿನ ಅನ್ಯಾಯ ಅಧರ್ಮಗಳು ಅವರ ಗಮನಕ್ಕೆ ಬಂದವು. ವಿದ್ಯಾರ್ಥಿಯಾಗಿದ್ದಾಗಲೇ ಯುವಕ ಅರವಿಂದ ಘೋಶ್‌ರ ಎಡಪಂಥೀಯ ವಿಚಾರಗಳಿಂದ ತುಂಬಾ ಪ್ರಭಾವಿತರಾದರು. ಕಾಲರಾ ಮಾರಿ ಗ್ರಾಮೀಣ ಬಂಗಾಳದಲ್ಲಿ ರುದ್ರ ನರ್ತನ ಮಾಡಿದಾಗ ಸುಭಾಷರು ಎಲ್ಲಾ ನಿರ್ಬಂಧಗಳನ್ನು ಉಲ್ಲಂಘಿಸಿ ಕಾಲರಾ ರೋಗಿಗಳ ವಿಶೇಷ ಶುಶ್ರೂಷಾ ಕಾರ್ಯವನ್ನು ಕೈಗೊಂಡರು. ಅಲ್ಲಿಯ ಹಸಿವು, ಬಡತನ, ಅನಾರೋಗ್ಯ, ಅನಕ್ಷರತೆ ಯುವಕ ಸುಭಾಷರ ಹೃದಯವನ್ನು ಕಲಕಿದವು. ಇವೆಲ್ಲಾ ಸಮಸ್ಯೆಗಳಿಗೆ ಧಾರ್ಮಿಕ ಪರಿಹಾರ ಸಿಗಬಹುದೆಂದು ಭ್ರಮಿಸಿ ಯಾರಿಗೂ ತಿಳಿಸದೆ ಮನೆ ಬಿಟ್ಟು ಗೆಳೆಯನೊಬ್ಬನ ಜೊತೆ ಸೇರಿ ಭಾರತದ ವಿವಿಧ ಯಾತ್ರಾ ಸ್ಥಳಗಳು, ಚಾರಿತ್ರಿಕ ಸ್ಥಳಗಳು ಹಾಗೂ ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳಿಗೂ ಅವರು ಭೇಟಿ ನೀಡಿದರು. ಅನೇಕ ಆಶ್ರಮಗಳನ್ನು ಸಂದರ್ಶಿಸಿದರು. ಅನೇಕ ಸಾಧುಗಳನ್ನು ಭೇಟಿ ಮಾಡಿದರು. ಅಲ್ಲಿದ ಅರ್ಥರಹಿತ ಆಚರಣೆಗಳು ಹಾಗೂ ಮೂಢನಂಬಿಕೆಗಳಿಂದ ಸುಭಾಷರಿಗೆ ಭ್ರಮ ನಿರಸನವಾಯಿತು. ಅಂಥ ಪವಿತ್ರ ಸ್ಥಳಗಳ ಧಾರ್ಮಿಕ ಮುಖಂಡರಲ್ಲಿರುವ ಜಾತಿ ಪದ್ಧತಿ ಮತ್ತು ಪಂಥಾಭಿಮಾನ ಗಳಿಂದ ಸುಭಾಷರಿಗೆ ಆಘಾತವಾಯಿತು. ಹೀಗೆ ಜೀವನದಲ್ಲಿ ಸ್ವಾನುಭವ ಪಡೆದ ಸುಭಾಷರು ಹೇಗೆ ಸದ್ದಿಲ್ಲದೆ ಮನೆ ಬಿಟ್ಟಿದ್ದರೋ ಹಾಗೆಯೇ ಸದ್ದಿಲ್ಲದೆ ಮನೆಗೆ ಮರಳಿದರು. ಆ ಹುಚ್ಚು ಮನಸ್ಸಿನ ಅಲೆದಾಟಗಳಿಂದ ಅವರಿಗೆ ತಮ್ಮ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಲು ಸಾಧ್ಯವಾಗಲಿಲ್ಲ.

(ಮುಂದುವರಿಯುವುದು)

ಇನ್ನು ಸಮ್ಮಿಶ್ರ ಸರಕಾರಗಳದ್ದೇ ರಾಜ್ಯ - ಹಾಗಿದ್ದರೆ ದೇವೇಗೌಡರ ಭರಾಟೆ ಸಂಚಾರ ಅಗತ್ಯವಿದೆಯೇ?

ದೇಶದಲ್ಲಿ ಮೊದಲ ಬಾರಿ ಸಮ್ಮಿಶ್ರ ಸರಕಾರದ ಪ್ರಯೋಗ ನಡೆದಿದೆ. ಇದು ಯಶಸ್ವಿಯಾದರೆ ದೇಶದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗಲಿದೆ. ಇನ್ನು ಮುಂದೆ ದೇಶದಲ್ಲಿ ಏನಿದ್ದರೂ ಸಮ್ಮಿಶ್ರ ಸರಕಾರಗಳೇ ರಾಜ್ಯ ಭಾರ ಮಾಡುತ್ತವೆ. ಎಂದು ಭವಿಷ್ಯ ನುಡಿದವರು ಸಂಯುಕ್ತ ರಂಗ ಸರಕಾರದ ಪ್ರಧಾನ ಮಂತ್ರಿ ಎಚ್.ಡಿ.ದೇವೇಗೌಡರು. ಬೆಳಗಾವಿ ಜಿಲ್ಲೆಯ ಕಾರ್ಯಕ್ರಮಗಳಲ್ಲಿ ಅವರಾಡಿದ ನುಡಿಗಳಿವು. ಅವರು ಮುಂದುವರಿದು ದೇಶದಲ್ಲಿ ಏಕಪಕ್ಷದ ಆಡಳಿತಕ್ಕೆ ಕೊನೆ ಬಿದ್ದಿದ್ದು ಭವಿಷ್ಯದಲ್ಲಿ ಜಾತ್ಯಾತೀತ ದೃಷ್ಟಿಕೋನದ ಪಕ್ಷಗಳ ಗುಂಪು ಮಾತ್ರ ಸೂತ್ರ ಹಿಡಿಯುತ್ತವೆ. ಎಂದು ಪ್ರತಿಪಾದಿಸಿದರು

ಕಾಂಗ್ರೆ ಮತ್ತು ಬಿಜೆಪಿಗೆ ಏಕಪಕ್ಷದ ಅಧಿಕಾರ ನಡೆಸಲು ಅವಕಾಶ ಮಾಡಿ ಕೊಡುವುದಿಲ್ಲವೆಂಬ ಮತದಾರರ ನಿರ್ಧಾರದ ಹಿನ್ನೆಲೆಯಲ್ಲಿ ಎಡಪಕ್ಷಗಳು ಅದರಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷದ ದೃಢ ನಿರ್ಧಾರದ ಪ್ರತಿಫಲವಾಗಿ ಕಾಂಗ್ರೆ, ಬಿಜೆಪಿ ವಿರೋಧಿಯಾದ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗೂಡುವಿಕೆಯ ಪರಿಣಾಮದಿಂದಾಗಿ ತಾವು ಕನಸಿನಲ್ಲಿಯೂ ನೆನಸದ ಪ್ರಧಾನಮಂತ್ರಿ ಪಟ್ಟ ಪಡೆದಿರುವ ಚರಿತ್ರಾರ್ಹ ಸಂದರ್ಭವನ್ನು, ಆದರಿಂದ ಉಂಟಾಗಿರುವ ಹೊಸ ರಾಜಕೀಯ ಸ್ಥಿತ್ಯಂತರಗಳನ್ನು ಸರಿಯಾಗಿಯೇ ಅರ್ಥೈಸಿ ಕೊಂಡಿದ್ದಾರೆ ದೇವೇಗೌಡರು. ಕಾಂಗ್ರೆ-ಬಿಜೆಪಿಗಳ ಅರ್ಥಿಕ-ರಾಜಕೀಯ ನೀತಿಗಳ ವಿರುದ್ಧವಾದ ಪರ್ಯಾಯ ವ್ಯವಸ್ಥೆಯನ್ನು ಪರ್ಯಾಯ ಆರ್ಥಿಕ ರಾಜಕೀಯ ನೀತಿಗಳನ್ನು ಜನರು ಅಪೇಕ್ಷಿಸುತ್ತಾರೆ ಎಂಬ ಅಂಶವನ್ನು ದೇವೇಗೌಡರು ಮನದಟ್ಟು ಮಾಡಿಕೊಂಡಿರಬೇಕೆಂದೆನಿಸುತ್ತದೆ. ಆದರೆ ಅವರ ವರ್ತನೆ ಮಾತ್ರ ಅವರ ಸರಕಾರ ಅನುಸರಿಸುತ್ತಿರುವ ಆರ್ಥಿಕ ರಾಜಕೀಯ ನೀತಿಗಳು ಮಾತ್ರ ದೇವೇಗೌಡರು ಅರ್ಥೈಸಿಕೊಂಡು ಜನರ ಮುಂದೆ ಪ್ರತಿಪಾದಿಸುತ್ತಿರುವ ದೇಶದ ಮುಂದಿನ ಹೊಸ ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ಭದ್ರ ಗೊಳಿಸುವ ನಿಟ್ಟಿನಲ್ಲಿ ತಪ್ಪುತ್ತದೆಂದು ಹೇಳ ಬೇಕಾಗುತ್ತದೆ. ಪರ್ಯಾಯ ವ್ಯವಸ್ಥೆ ಪರ್ಯಾಯ ನೀತಿಗಳನ್ನು (ಅದು ಹದಿಮೂರು ಪಕ್ಷಗಳ ಒಟ್ಟಭಿಪ್ರಾಯದ ಕಾರ್ಯಕ್ರಮದಲ್ಲಿದೆ. ಸಿ.ಪಿ.ಐ.(ಎಂ) ಪಕ್ಷದ ಅಥವಾ ಎಡಪಕ್ಷಗಳ ಕನಿಷ್ಟ ಕಾರ್ಯಕ್ರಮದಲ್ಲಿ) ಕೂಡ ಸರಿಯಾಗಿ ಅರ್ಥಮಾಡಿಕೊಂಡು ದೇಶ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆಸೆ ಆಕಾಂಕ್ಷೆಗಳ ಪೂರೈಕೆಗೆ ಸಮರ್ಪಕವಾದ ನೀತಿಯನ್ನು ಅನುಸರಿಸುವುದರಲ್ಲಿಯೂ ದೇವೇಗೌಡರು ದಾರಿ ತಪ್ಪುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಅದರ ಪರಿಣಾಮವಾಗಿ ದೇಶ ಹಾಗೂ ಜನತೆ ಎದುರಿಸಬೇಕಾದ ಸಮಸ್ಯೆಗಳಿಗೆ ಪರಿಹಾರ ಸಿಗದಂತಾಗಿ ಏಳು ತಿಂಗಳ ತಮ್ಮ ಆಡಳಿತೆಯ ಕುರಿತು ಜನರಲ್ಲಿ ಭ್ರಮನಿರಸನ ಉಂಟಾಗುತ್ತದೆಂಬ ಅರಿವು ಈಗಾಗಲೆ ದೇವೇಗೌಡರ ಗಮನಕ್ಕೆ ಬಂದಿರಬೇಕೆಂದನಿಸುತ್ತದೆ. ಯಾಕೆಂದರೆ ಜನವರಿ 11ರಿಂದ 13ರ ವರೆಗೆ ಬೆಳಗಾವಿ, ಗುಲ್ಬರ್ಗ, ಬಿಜಾಪುರ, ಜಿಲ್ಲೆಗಳಲ್ಲಿ ಸಂಚಾರ ಮಾಡಿದ, ಅಡಿಗಲ್ಲು ಸಮಾವೇಶಗಳನ್ನು ನೆರವೇರಿಸಿದ ಕ್ರಮ, ಆ ಸಭೆಗಳಲ್ಲಿ ಅವರಾಡಿದ ಮಾತುಗಳೆಲ್ಲ ತಮ್ಮ ಸರಕಾರದ ಉಳಿವಿನ ಕುರಿತು ಅವರಲ್ಲುಂಟಾಗುತ್ತಿರುವ ನಿರಾಶ ಭಾವನೆಯ ಕುರುಹುಗಳೆಂಬುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಅದರ ಅರಿವು ರಾಜ್ಯ ಸರಕಾರಕ್ಕೂ ಇದ್ದಂತೆ ಕಂಡುಬರುತ್ತಿದೆ. ತಮ್ಮ ಭಾಷಣಗಳಲ್ಲಿ ತಮ್ಮ ಸರಕಾರದ ಸ್ಥಿತಿ ತಾವಿರುವ ಪರಿಸ್ಥಿತಿ ವಿಶ್ಲೇಷಿಸಿದ ದೇವೇಗೌಡರು ಎಷ್ಟು ದಿನ ಅಧಿಕಾರದಲ್ಲಿರುವೆ ಎಂಬ ಚಿಂತೆ ತಮಗಿಲ್ಲೆಂದು ಹೇಳುತ್ತಾ, ಹೋದಲ್ಲೆಲ್ಲ ಶಿಕ್ಷಣ ಸಂಸ್ಥೆಗಳಿಗೆ, ನೀರಾವರಿ ಯೋಜನೆಗಳಿಗೆ, ಸಹಕಾರಿ ಬ್ಯಾಂಕುಗಳಿಗೆ, ಜಿಲ್ಲಾ ಪರಿಷತ್ ಮತ್ತಿನ್ನಿತರ ಕಚೇರಿಗಳಿಗೆ, ಒಂದೇ ಸ್ಥಳದಲ್ಲಿ ಸಾಲಾಗಿ ನಾಲ್ಕೈದು ಅಡಿಗಲ್ಲುಗಳನ್ನಿಡುವುದರ ಮೂಲಕ ತಮ್ಮ ಪ್ರಧಾನಿ ಪಟ್ಟದ ದಿನಗಳನ್ನೆಣಿಸುತ್ತಿದ್ದಾರೆಂದು ಜನರಾಡುತ್ತಿರುವುದು ಕಿವಿಗೆ ಬೀಳುತ್ತಿದೆ. ತಾನು ಮಣ್ಣಿನ ಮಗನೆಂದು ಬೆನ್ನು ಚಪ್ಪರಿಸಿಕೊಳ್ಳುತ್ತ ಹಾಸನ ಒಂದೆ ಜಿಲ್ಲೆಯಲ್ಲಿ 40 ಕ್ಕೂ ಹೆಚ್ಚು ಕಾಮಗಾರಿಗಳಿಗೆ ಅಡಿಗಲ್ಲು ಹಾಕಿದ್ದಾರೆ. ಹಲವು ಕಡೆ ಅಡಿಗಲ್ಲಿನ ಮೇಲೆ ಅಡಿಗಲ್ಲು ಬಿದ್ದಿದೆ.

ಎನ್.ಕೆ.ಉಪಾಧ್ಯಾಯ

ಸೋಲಾಪುರ-ಗದಗ ಗೇಜ್ ಪರಿವರ್ತನೆ, ಬಿಜಾಪುರ-ಜಮಖಂಡಿ -ಚಿಕ್ಕೋಡಿ ಹೊಸ ರೇಲ್ವೆಗಳಿಗೆ ಅಡಿಗಲ್ಲು ಹಾಕಿದ್ದನ್ನು ಮರೆಯುತ್ತಿರುವಾಗಲೇ ದೇವೇಗೌಡರು ಹಾಸನ-ಬೆಂಗಳೂರು- ಕಡೂರು-ಚಿಕ್ಕ ಮಗಳೂರು, ಹುಬ್ಬಳ್ಳಿ-ಬೆಳಗಾವಿಯ ಹೊಸ ಮಾರ್ಗ, ಹುಬ್ಬಳ್ಳಿ-ಅಂಕೋಲ ಮಾರ್ಗಗಳಿಗೆ ಶಿಲಾನ್ಯಾಸ ಮಾಡಿದ್ದಾರೆ. ಈ ರೇಲ್ವೇ ಮಾರ್ಗಗಳ ಕೆಲಸ ನಡೆಯುತ್ತವೆಯೇ? ಬಿಜಾಪುರ, ಬಾಗಲಕೋಟೆ ಸಹಕಾರಿ ನೂಲಿನ ಗಿರಣಿಗಳು ಮುಚ್ಚಿ 10 ವರ್ಷ ದಾಟಿವೆ. ರಾಯಚೂರು, ಬಾಳೆಕುಂದ್ರಿ, ಸವದತ್ತಿ ಮತ್ತಿನ್ನಿತರ 7-8 ಸಹಕಾರಿ ನೂಲಿನ ಗಿರಣಿಗಳು ಮುಚ್ಚುವ ಹಂತದಲ್ಲಿವೆ. ಹೀಗಿದ್ದರೂ ದೇವೇಗೌಡರು ಹೊಸ ನೂಲಿನ ಗಿರಣಿಗೆ, ಹೊಸ ಸಕ್ಕರೆ ಕಾರ್ಖಾನೆಗಳಿಗೆ ಅಡಿಗಲ್ಲು ಹಾಕಿದ್ದಾರೆ. ನಾಲ್ಕು ದಿವಸಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಜಾಹೀರಾತುಗಳನ್ನು ಓದಿದರೆ ಉತ್ತರ ಕರ್ನಾಟಕ ಮತ್ತು ಹಾಸನ ಜಿಲ್ಲೆಗಳ ಜನತೆಗೆ ಸ್ವರ್ಗ ತಲುಪಲು ಬರೇ ಮೂರೇ ಗೇಣು ಉಳಿದಂತೆ ಕಂಡು ಬರುತ್ತದೆ. ಇದು ಅಸಂಭವವೆಂದೂ ಜನರಿಗೆ ಗೊತ್ತಿದೆ. ಯಾಕೆಂದರೆ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ ಅಂದರೆ ಇಂಡಿ ಏತ ನೀರಾವರಿ ಯೋಜನೆಗೆ ಅಡಿಗಲ್ಲು ಹಾಕಿದ್ದು ಸಿಂದಗಿಯ ಎಚ್.ಜಿ.ಬಿ. ಪ್ರೌಢಶಾಲಾ ಆವರಣದಲ್ಲಿ, ನಾಣಯ್ಯಪುರ ನೀರಾವರಿ ಯೋಜನೆಯಿಂದ ಕೆಂಬಾವಿಯ ತನಕ ಬಂದ ಕಾಲುವೆಯಿಂದ ಸಿಂದಗಿ, ಇಂಡಿ ತಾಲೂಕುಗಳಿಗೆ ಕಾಲುವೆ ತೆಗೆಯಬೇಕು. ಮೂರು ಕಿ.ಮೀ. ದೂರದಲ್ಲಿ ಈ ಕೆಲಸ ಪ್ರಾರಂಭ. ಅಡಿಗಲ್ಲು ಒಂದು ಕಡೆ, ಕೆಲಸ ಪ್ರಾರಂಭವಾಗಬೇಕಾಗದ್ದು ಮತ್ತೊಂದು ಕಡೆ. ರಾಜ್ಯ ಸರಕಾರ ದೇವೇಗೌಡರ ಸಲುವಾಗಿ ರೂಪಿಸಿದ ಕಾರ್ಯಕ್ರಮಗಳ ವೈಖರಿ ಇದಾಗಿದೆ. ಮಂತ್ರಿಗಳ ಹಿಂಡು ಅಧಿಕಾರಿಗಳ ಹಿಂಡು, ಪೋಲೀಸರ ಹಿಂಡು, ನೂರಾರು ಕಾರು-ಜೀಪುಗಳು, ಎಷ್ಟು ಪೆಟ್ರೋಲ್, ಎಷ್ಟು ಡೀಸಲ್ ವ್ಯಯ. ಬಡವರಿಗೆ ಹೊಟ್ಟೆಗೆ ಕೂಳಿಲ್ಲ, ತಲೆಗೆ ಸೂರಿಲ್ಲ, ಮಕ್ಕಳಿಗೆ ಕಲಿಯಲು ಆಶ್ರಯವಿಲ್ಲ, ಆದರೆ ದೇವೇಗೌಡರ ಕಾರ್ಯಕ್ರಮಗಳಿಗೆ ಕೋಟ್ಯಾವಧಿ ಹಣ ಅಪವ್ಯಯ. ನಾಲ್ಕು ಹೆಲಿಕಾಪ್ಟರ್‌ಗಳಲ್ಲಿ ಮಂತ್ರಿಗಳ ಸಂಚಾರ, ಹೆಲಿಕಾಪ್ಟರ್‌ಗಳ ಖರ್ಚು ಎಷ್ಟು ಕೋಟಿ. ಈ ಮಧ್ಯೆ ಕೋಮುವಾದಿ ಸಮ್ಮೇಳನಗಳಲ್ಲಿ ಭಾಷಣ, ರಾಮಕೃಷ್ಣ ಹೆಗಡೆಯವರ ನವ ನಿರ್ಮಾಣ ವೇದಿಕೆಯ ಅಖಿಲ ಭಾರತ ಸಂಸ್ಥಾಪನಾ ಚಟುವಟಿಕೆಯ ಹಿನ್ನೆಲೆಯಲ್ಲಿ ದೇವೇಗೌಡರು ಈ ಕಾರ್ಯಕ್ರಮಗಳನ್ನು ತರಾತುರಿಯಲ್ಲಿ ಹಾಕಿಕೊಂಡಿದ್ದಾರೆಂದು ಜನರಾಡುತ್ತಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಅಧಿಕಾರಗಳಿಕೆಯಿಂದ ದೂರ ಇಡಬೇಕು. ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ರಾಜಕೀಯ ವ್ಯವಸ್ಥೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಭದ್ರವಾಗಿ ಉಳಿಯಬೇಕು. ಪರ್ಯಾಯ ವ್ಯವಸ್ಥೆಯ ಮೂಲಕ ದೇಶದ, ಜನತೆಯ ಸಮಸ್ಯೆಗಳನ್ನು ಪರಿಹರಿಸಬೇಕು. ಅದರ ಮೂಲಕ ಜನರಲ್ಲಿ ಹೊಸ ಜಾಗೃತಿಯನ್ನುಂಟುಮಾಡಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಖಾಯಂ ಆಗಿ ಜನರ ಒಲವಿನಿಂದ ದೂರ ಸರಿಸಬೇಕು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹಾಗೆಯೇ ಇತರ ಎಡ ಪಕ್ಷಗಳೂ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೂ ಸತತ ಪ್ರಯತ್ನ ನಡೆಸಿವೆ. ಆ ಪ್ರಯತ್ನದ ಫಲವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ನಾಂದಿಯಾಗಬೇಕು. ಇದಾಗ ಬೇಕಾದರೆ ದೇವೇಗೌಡರು ತಮ್ಮ ಆಡಳಿತೆಯ ಶೈಲಿಯಲ್ಲಿ ಬದಲಾವಣೆ ತರಬೇಕು. ಎಲ್ಲರ ಒಪ್ಪಿಗೆಯ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ನಿಷ್ಠೆಯಿಂದ ಕಾರ್ಯ ರೂಪದಲ್ಲಿ ತರಬೇಕು. ಎಡ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಆಡಳಿತೆ ನಡೆಸ ಬೇಕು. ಬಹಳ ಪ್ರಾಮುಖ್ಯವಾದ, ಕೆಲವೇ ಕೆಲವು ನೀರಾವರಿ, ಕೈಗಾರಿಕಾ ಯೋಜನೆಗಳು ಪೂರ್ತಿಗೊಳ್ಳುವಂತೆ ಮಾಡಬೇಕು. ತಮ್ಮ ಅಧಿಕಾರವಧಿ ಅಲ್ಪಕಾಲದ್ದೆಂದು ಕಂಡು ಬಂದ ನಂತರ ನೂರಾರು ಕಡೆಗಳಲ್ಲಿ ಅಡಿಗಲ್ಲು ಹಾಕುವುದರ ಬದಲಾಗಿ ಒಂದೆರಡು ಕೆಲಸಗಳನ್ನಷ್ಟೇ ಮಾಡಿ ತೋರಿಸಿದರೆ ಜನರು ಅವರನ್ನು ಕೊಂಡಾಡಿಯಾರು. ದೇವೇಗೌಡರು ಈ ದಾರಿ ಹಿಡಿಯಲಿ. ರಾಜ್ಯ ಸರಕಾರಕ್ಕೆ ಸರಿಯಾದ ದಾರಿ ತೋರಿಸಲಿ. ತಮ್ಮ ಕಾರ್ಯಕ್ರಮಗಳಿಂದ ದೇವೇಗೌಡರೇ ಹೇಳುವಂತೆ 'ಭವಿಷ್ಯದಲಿ ಜಾತ್ಯಾತೀತ ದೃಷ್ಟಿಕೋನದ ಪಕ್ಷಗಳ ಗುಂಪು ಮಾತ್ರ ಆಡಳಿತೆ ಸೂತ್ರ ಹಿಡಿಯುವಂತೆ" ಮಾಡಲಿ.

ಹರಿಹರದಲ್ಲಿ ಬೀಡಿ ಕಾರ್ಮಿಕರ ಮೆರವಣಿಗೆ

ಬೀಡಿಕಾರ್ಮಿಕರಿಗಾಗಿ ಪರಿಷ್ಕರಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಕನಿಷ್ಟ ಕೂಲಿಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹರಿಹರದ ಬೀಡಿ ಕಾರ್ಮಿಕರು ಜನವರಿ 16 ರಂದು ಸ್ಥಳೀಯ ನಿರೀಕ್ಷಕರ ಕಛೇರಿ ಎದುರು ಪ್ರದರ್ಶನ ನಡೆಸಿದರು. ಸಿಐಟಿಯು ನೇತೃತ್ವದ ರಾಜ್ ಬೀಡಿ ಕಾರ್ಮಿಕರ ಒಕ್ಕೂಟವು ನೀಡಿದ ಕರೆಯ ಮೇರೆಗೆ ಈ ಪ್ರತಿಭಟನಾ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿತ್ತು. ಸಾವಿರ ಬೀಡಿ ಸುತ್ತಲು ಸರಕಾರ ನಿಗದಿಪಡಿಸಿರುವ ರೂ.42.46 ಕೂಲಿಯನ್ನು ಎಲ್ಲಾ ಬೀಡಿ ತಯಾರಕರು ಮತ್ತು ಅವರ ಗುತ್ತಿಗೆದಾರರು ಅವರ ಕಾರ್ಮಿಕರಿಗೆ ನೀಡುವಂತೆ ಕ್ರಮ ಜರುಗಿಸಬೇಕೆಂದೂ ಸರಕಾರದ ಆದೇಶದ ಪ್ರಕಾರ ದಿನಾಂಕ 1.11.96 ರಿಂದ ಹೊಸ ಕೂಲಿ ದರಗಳು ಅನ್ವಯವಾಗುವುದರಿಂದ ಅಲ್ಲಿಂದ ಸಿಗಬೇಕಾದ ಅರಿಯರ್ಸ್ ಹಣವನ್ನು ಬೀಡಿ ಕಾರ್ಮಿಕರಿಗೆ ಪಾವತಿ ಮಾಡ ಬೇಕೆಂದು ಈ ಸಂದರ್ಭದಲ್ಲಿ ಕಾರ್ಮಿಕ ನಿರೀಕ್ಷಕರಿಗೆ ಸಲ್ಲಿಸಲಾದ ಮನವಿಯಲ್ಲಿ ಆಗ್ರಹಿಸಲಾಗಿದೆ.

ಇದಕ್ಕೂ ಮೊದಲು ಬೀಡಿ ಕಾರ್ಮಿಕರು ಸ್ಥಳೀಯ ಸಿಐಟಿಯು ಆಫೀಸಿನಿಂದ ಮೆರವಣಿಗೆಯಲ್ಲಿ ಹೊರಟು ಭಾರತ್ ಬೀಡಿ ಕಂಪನಿಯ ಹರಿಹರದ ಡಿಪೋ ವ್ಯವಸ್ಥಾಪಕರಿಗೂ ಮನವಿ ಸಲ್ಲಿಸಿದರು. ಜ್ಯೋತಿ ಹೋಂ ಇಂಡಸ್ಟ್ರೀಸ್ ವ್ಯವಸ್ಥಾಪಕರಿಗೂ ಮನವಿ ಸಲ್ಲಿಸಿದರು. ಕಾ|| ನಿತ್ಯಾನಂದ ಸ್ವಾಮಿ, ಕಾ|| ಎ.ಎಸ್.ಮೂರ್ತಿ, ಕಾಂ|| ಮಹೇಶ್ ಪತ್ತಾರ್, ಕಾ|| ಜಬ್ಬಾರ್ ಸಾಬ್ ಮೊದಲಾದವರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು.

ತುಮಕೂರು: ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘವು ಕರ್ನಾಟಕ ರಾಜ್ಯ ಸರಕಾರವನ್ನು(ಕಾರ್ಮಿಕ ಇಲಾಖೆ ಯನ್ನು) ಈ ಕೆಳಕಂಡ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಲ್ಲಿಸಿದ್ದ ಮನವಿ ಪತ್ರ

1. ದಿನಾಂಕ 1.11.96 ರಂದು ಸರಕಾರಿ ಪ್ರಕಟಿತ ಸಾವಿರ ಬೀಡಿಯ ಕನಿಷ್ಟ ಕೂಲಿ ರೂ 42.46(ತುಟ್ಟಿಭತ್ಯೆಯೂ ಒಳಗೊಂಡು) ಈ ಕೂಡಲೇ ಜಾರಿಯಾಗಬೇಕು. ಈ ಅಂಶವನ್ನು ಕರ್ನಾಟಕ ರಾಜ್ಯ ಸರಕಾರದ ಗೆಜೆಟ್‌ನಲ್ಲಿ ಈ ಕೂಡಲೇ ಪ್ರಕಟಿಸಬೇಕು.
2. ಎಲ್ಲಾ ಬೀಡಿ ಕಾರ್ಮಿಕರಿಗೆ ಅವರು ಕೆಲಸ ಮಾಡುತ್ತಿರುವ ಕಾರ್ಖಾನೆಗಳಿಂದ ಲಾಗ್ ಪುಸ್ತಕ ಹಾಗೂ ಐಡೆಂಟಿಟಿ ಕಾರ್ಡ್ ಗಳನ್ನು ಕೊಡಿಸಬೇಕು.
3. ವಸತಿಹೀನ ಕಾರ್ಮಿಕರಿಗೆ(ಬೀಡಿ ಕಾರ್ಮಿಕರಿಗೆ) ಸಾಮೂಹಿಕ ವಸತಿ ಯೋಜನೆಯೊಂದನ್ನು ರೂಪಿಸಬೇಕು.
4. ಎಲ್ಲಾ ಬೀಡಿ ಕಾರ್ಮಿಕರಿಗೆ ಹಸಿರು ಪಡಿತರ ಕಾರ್ಡನ್ನು ನೀಡಬೇಕು.
5. ಬೀಡಿ ಕಾರ್ಮಿಕರಿಗಾಗಿಯೇ ತುಮಕೂರು ಜಿಲ್ಲೆಯಲ್ಲಿ ಸುಸಜ್ಜಿತ ಆಸ್ಪತ್ರೆ ಯನ್ನು ತೆರೆಯಬೇಕು.

ಜನವರಿ 10 ರಂದು ತುಮಕೂರಿನಲ್ಲಿ ನಡೆದ ರಾಜ್ಯ ಮಟ್ಟದ ಹೋರಾಟದ ಭಾಗವಾಗಿ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಅಡಿ ನಗರದ ಟೌನ್‌ಹಾಲ್‌ನಿಂದ ನೂರಾರು ಕಾರ್ಮಿಕರು ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ಎದುರು ಸಮಾವೇಶಗೊಂಡಿತು. ಈ ಸಂದರ್ಭದಲ್ಲಿ ಮಂತ್ರಿಗಳಾದ ಜೆ.ಹೆಚ್ .ಪಟೇಲರಿಗೆ ಜಿಲ್ಲಾ ಆಡಳಿತದ ಮೂಲಕ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಮಹಮದ್ ದಸ್ತಗೀರ್, ಟಿಡಿಎಲ್ಆರ್‌ಡಿಯುನ ಚೆಲುವರಾಜು, ಎಸ್.ಎಫ್.ಐ. ಜಿಲ್ಲಾಧ್ಯಕ್ಷರಾದ ಎನ್.ಕೆ.ಸುಬ್ರಹ್ಮಣ್ಯ, ಗುಬ್ಬಿ ತಾಲ್ಲೂಕು ಬೀಡಿ ಕಾರ್ಮಿಕ ಸಂಘದ ಅಧ್ಯಕ್ಷರು, ಶಿರಾ ತಾಲ್ಲೂಕು ಬೀಡಿ ಕಾರ್ಮಿಕ ಸಂಘದ ಕಾರ್ಯದರ್ಶಿ ನಿಸಾರ್ ಅಹಮದ್, ಕುಣಿಗಲ್‌ನ ಮುನಾಫ್, ಸಿಪಿಐ(ಎಂ)ನ ಜಿಲ್ಲಾಕಾರ್ಯದರ್ಶಿ ಉಮೇಶ್, ತುಮಕೂರಿನ ಕಾಂ|| ಶಕೀಲಾ ಮತ್ತಿತರರು ಮಾತನಾಡಿದರು.

ಫೆ. 20 ರ ಗಡುವು: 1000 ಬೀಡಿಯ ಕನಿಷ್ಟ ಕೂಲಿ 42.46 ರೂ ನ ಸಂಬಂಧ ಸರಕಾರ ಗೆಜೆಟ್‌ನಲ್ಲಿ ಪ್ರಕಟಿಸಬೇಕೆಂದು ಹಾಗೂ ಫೆ.20 ರ ಒಳಗೆ ಇದನ್ನು ಜಾರಿಗೊಳಿಸದಿದ್ದಲ್ಲಿ ಅನಿರ್ದಿಷ್ಟ ಕಾಲ ಮುಷ್ಕರಕ್ಕೆ ಇಳಿಯಬೇಕಾಗುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ನುಡಿದರು.

ಧರಣೆ ನಿರತ ಕಾರ್ಮಿಕರನ್ನು ಜಿಲ್ಲಾ ಉಸ್ತುವಾರಿ ಹಾಗೂ ರಾಜ್ಯ ಕಾರ್ಮಿಕ ಸಚಿವರಾದ ಶ್ರೀ ಬಿ.ಸತ್ಯನಾರಾಯಣ್ ರವರು ಭೇಟಿ ಮಾಡಿ ಕನಿಷ್ಟ ಕೂಲಿ ಸಂಬಂಧ ಗೆಜೆಟ್‌ನಲ್ಲಿ ಪ್ರಕಟಣೆ ತರಲು ಹಾಗೂ ವಸತಿ ಹೀನ ಬೀಡಿ ಕಾರ್ಮಿಕರಿಗೆ ಸಾಮೂಹಿಕ ವಸತಿ ಯೋಜನೆ ರೂಪಿಸಲು ತಾವು ಕ್ರಮವಹಿಸುವುದಾಗಿ ಭರವಸೆ ನೀಡಿದರು.

ಈ ಸಂಬಂಧದಲ್ಲಿ ಕಾರ್ಮಿಕ ಸಚಿವರಿಗೆ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರಿಗಾಗಿ ಪ್ರತ್ಯೇಕ ಆಸ್ಪತ್ರೆ ಪ್ರಾರಂಭಿಸುವಂತೆ ಜಿಲ್ಲಾ ಬೀಡಿ ಕಾರ್ಮಿಕರ ಸಂಘಟನೆ(ಸಿಐಟಿಯು) ಮನವಿ ಮಾಡಿತು.

ದತ್ತಾ ಸಾಮಂತ್‌ಭೀಕರ ಕೊಲೆ ಸಿಐಟಿಯು ಖಂಡನೆ

ಮಹಾರಾಷ್ಟ್ರದ ಹೆಸರಾಂತ ಕಾರ್ಮಿಕ ಧುರೀಣ ಚಾರಿತ್ರಿಕ ಹತ್ತಿ ಗಿರಣಿ ಕಾರ್ಮಿಕರ ಹೋರಾಟದ ಮುಂದಾಳು ವಿಧಾನ ಸಭೆ ಹಾಗೂ ಲೋಕಸಭೆ ಸದಸ್ಯರಾಗಿದ್ದ ದತ್ತಾ ಸಾಮಂತ್ ಅವರನ್ನು ಗುಂಡಿಕ್ಕಿ ಕೊಲೆ ಮಾಡಿರುವುದನ್ನು ಕೇಳಿ ಕಾರ್ಮಿಕ ವರ್ಗಕ್ಕೆ ದಿಗ್ಭ್ರಮೆ ಆಗಿದೆ. ಶಿವಸೇನೆ - ಬಿಜೆಪಿ ಸರಕಾರ ಮಹಾರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಪ್ರಮುಖ ವ್ಯಕ್ತಿಗಳ ಕೊಲೆ ತೀವ್ರವಾಗಿ ಹೆಚ್ಚಿದೆ ಎಂದು ಖಂಡಿಸಿರುವ ಸಿಐಟಿಯು ಕರ್ನಾಟಕ ರಾಜ್ಯ ಅಧ್ಯಕ್ಷ ಎಸ್ ಸೂರ್ಯನಾರಾಯಣರಾವ್ ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಡಾ|| ಸಾಮಂತ್ ಅವರ ನಿಧನ ಕಾರ್ಮಿಕ ವರ್ಗದ ಹೋರಾಟಕ್ಕೆ ಅದರಲ್ಲೂ ಪೆನ್‌ಶನ್ ಹೋರಾಟಕ್ಕೆ ತುಂಬಲಾಗದ ನಷ್ಟ ಎಂದು ಡಾ|| ದತ್ತಾ ಸಾಮಂತ್ ಅವರ ಕುಟುಂಬಕ್ಕೆ ಹಾಗೂ ಅವರು ನಡೆಸುತ್ತಿರುವ ಕಾರ್ಮಿಕ ಸಂಘಟನೆ ಮತ್ತು ಮಹಾರಾಷ್ಟ್ರದ ಕಾರ್ಮಿಕ ವರ್ಗಕ್ಕೆ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ತನ್ನ ತೀವ್ರ ಸಂತಾಪವನ್ನು ಸೂಚಿಸಿದೆ.

ಮಹಿಳಾ ಮೀಸಲಾತಿ ಮಸೂದೆ ಮಹಿಳೆಯರ ಒಗ್ಗಟ್ಟಿಗೆ ಕರೆ

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಜಾರಿಗೆ ತರುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಮಹಿಳೆಯರೆಲ್ಲರು ಒಂದಾಗಬೇಕು. ಎಂದು ಜನವಾದಿ ಮಹಿಳಾ ಸಂಘಟನೆಯ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷೆ ಸತ್ಯಾ. ಎಸ್. ಕರೆ ನೀಡಿದ್ದಾರೆ. ಇತ್ತೀಚೆಗೆ ಕುಂದಾಪುರದಲ್ಲಿ ನಡೆದ ಸಂಘಟನೆಯ ತಾಲ್ಲೂಕು ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿದ್ದ ಅವರು ದೇಶದ ಎಲ್ಲ ಮಹಿಳೆಯರು ಒಗ್ಗಟ್ಟಿನಿಂದ ಒಂದು ಶಕ್ತಿಯಾಗಿ ರೂಪುಗೊಂಡಲ್ಲಿ ಮಾತ್ರ ಮಹಿಳೆಯರಿಗೆ ಇಂತಹ ಸಾಮಾಜಿಕ ನ್ಯಾಯ ದೊರೆಯುವುದು ಸಾಧ್ಯ ಎಂದೂ ಹೇಳಿದರು.

"ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಸಂಬಂಧಿಸಿದಂತೆ ಇಡೀ ದೇಶದಲ್ಲಿ ತುರ್ತಾಗಿ ಜನಾಭಿಪ್ರಾಯ ರೂಪಿಸಬೇಕು. ಹಾಗೂ ಇದಕ್ಕಾಗಿ ಸಂಘಟಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು" ಎಂದು ಹೇಳಿದ ಅವರು, ಈ ಹಿನ್ನೆಲೆಯಲ್ಲಿ ಕೇವಲ ಮಹಿಳೆಯರಲ್ಲದೆ, ಮಹಿಳೆಯರ ಪರವಾಗಿರುವ ಪುರುಷರೂ ಕೂಡ ಕೈ ಜೋಡಿಸಬೇಕು ಎಂದು ಕೋರಿದರು.

"ಎಷ್ಟು ಪ್ರತಿಭಟನೆ ನಡದರೇನು, ಸೌಂದರ್ಯ ಸ್ಪರ್ಧೆಯಂತೂ ನಿಲ್ಲಲಿಲ್ಲವಲ್ಲ?" ಎಂಬ ಕುಹಕಗಳಿಗೆ ಇದೇ ವೇದಿಕೆಯಿಂದ ಉತ್ತರಿಸಿದ ಸತ್ಯಾ ಅವರು, ಪ್ರತಿಭಟನೆಗಳಿಂದಾಗಿ ಸೌಂದರ್ಯ ಸ್ಪರ್ಧೆಯ ಸಂಘಟಕರು ಹಾಗೂ ಅವರ ಬೆಂಬಲಕ್ಕೆ ನಿಂತಿದ್ದ ರಾಜ್ಯಸರಕಾರ ಎದುರಿಸಿದ ಎಡರು ತೊಡರುಗಳನ್ನು ವಿವರಿಸಿದರು.

ಇನ್ನು ಮುಂದಿನ ಎರಡು ವರ್ಷಗಳು ಈ ಸ್ಪರ್ಧೆಯನ್ನು ಭಾರತದಲ್ಲಿ ನಡೆಸದಿರಲು ನಿರ್ಧರಿಸಿರುವುದು; ಸ್ಪರ್ಧೆಯ ಮೂರು ಅಂಶಗಳ ಸ್ಥಾನಗಳನ್ನು ಬದಲಾಯಿಸಿದ್ದು; ಭದ್ರತಾ ಸೌಲಭ್ಯಕ್ಕಾಗಿ ಎಬಿಸಿಎಲ್ ಸಂಸ್ಥೆ ಹಣ ತರಬೇಕಾಗಿ ಬಂದದ್ದು; ಕೊನೆಯ ದಿನಗಳಲ್ಲಿ ಡಾ|| ರಾಜ್‌ಕುಮಾರ್ ಅವರನ್ನು ಮುಖ್ಯ ಅತಿಥಿಯಾಗಿ ಸ್ಪರ್ಧೆಗೆ ಆಹ್ವಾನಿಸಲು ಧಾವಿಸಿದ್ದು; ಅರ್ಧದಷ್ಟು ಟಿಕೆಟ್‌ಗಳು ಮಾರಾಟವಾಗದೆ ಉಳಿದಾಗ ಅದಕ್ಕಾಗಿ ಸಂಚಾರಿ ಟಿಕೆಟ್ ಕೌಂಟರ್ ವ್ಯವಸ್ಥೆ ಮಾಡಿದ್ದು; ಸ್ಪರ್ಧೆಗೆ ಕೇವಲ ಎರಡು ದಿನಗಳಿರುವಾಗ ಟಿಕೆಟ್ ಮಾರಾಟಕ್ಕಿದೆ ಎಂದು ಕನ್ನಡ ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದು; ಪ್ರಖ್ಯಾತ ಜಾಹೀರಾತು ಮತ್ತು ಸಾರ್ವಜನಿಕ ಸಂಪರ್ಕಸಂಸ್ಥೆ 'ಮುದ್ರಾ' ದವರು ಎಬಿಸಿಎಲ್ ಪರವಾಗಿ ಕೆಲಸ ಮಾಡಲು ನಿರಾಕರಿಸಿದ್ದು- ಇವೆಲ್ಲವೂ ಪ್ರತಿಭಟನೆಗೆ ಸಂದ ಜಯ ಎಂದು ಸತ್ಯಾ ಹೇಳಿದರು.

"ಒಂದಷ್ಟು ದಿನಗಳ ಕಾಲ ಎಬಿಸಿಎಲ್‌ನವರಿಗೆ ಹಾಗೂ ಇವರ ಬೆಂಬಲಕ್ಕೆ ನಿಂತವರಿಗೆ ನಿದ್ರೆ ಕೆಡಿಸಿದವಲ್ಲ, ಅದೂ ಕೂಡ ಪ್ರತಿಭಟನೆಗೆ ಸಿಕ್ಕ ಫಲ" ಎಂದರು.

"ಜನವಾದಿ ಮಹಿಳಾ ಸಂಘಟನೆಯ ಪ್ರಾಥಮಿಕ ಉದ್ದೇಶ ಮಹಿಳೆಯರ ಜಾಗೃತಿ, ಇದಕ್ಕಾಗಿ ಮನೆಗಳಲ್ಲಿ, ಮನಸ್ಸುಗಳಲ್ಲಿ ಪರಿವರ್ತನೆಯ ಕೆಲಸ ಆರಂಭವಾಗ ಬೇಕು" ಎಂದೂ ಕರೆ ನೀಡಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಸಮಿತಿ ಅಧ್ಯಕ್ಷೆ ಹಾಗೂ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಉತ್ಕಲಾ ಅವರು ಮಹಿಳೆಯರಲ್ಲಿ ಸಂಘಟನೆಯ ಅಗತ್ಯ ಕುರಿತು ಹಾಗೂ ಜನವಾದಿ ಮಹಿಳಾ ಸಂಘಟನೆಯು ನಡೆದು ಬಂದಿರುವ ಹಾದಿ ಕುರಿತು ವಿವರಿಸಿದರು.


ಪರಂಪರಾಗತ ಮೌಲ್ಯಗಳನ್ನು ಮಹಿಳೆಯರ ಮೇಲೆ ಹೇರುವುದನ್ನು ವಿರೋಧಿಸಿದ ಉತ್ಕಲಾ ಅವರು ಈ ಎಚ್ಚರವನ್ನು ಮೊದಲಿಗೆ ಮಹಿಳೆಯರೇ ಅರಿತು ಕೊಳ್ಳಬೇಕು ಎಂದರು.

ತಾಲ್ಲೂಕು ಸಮಿತಿ ಕಾರ್ಯದರ್ಶಿ ಎಂ.ಶಾಂತ, ತಾಲ್ಲೂಕು ಪಂಚಾಯ್ತಿ ಸದಸ್ಯೆ ಗುಣರತ್ನ, ಬ್ರಹ್ಮಾವರದ ಒಫಿಲ್ಯಾ ಫರ್ನಾಂಡಿಸ್‌ಅವರುಗಳುಮಾತನಾಡಿದರು.

ಕೆ.ಉತ್ಕಲಾ ಅವರು ನೂತನ ಸಮಿತಿಯ ಅಧ್ಯಕ್ಷರಾಗಿಯೂ, ಗುಣರತ್ನ ಅವರು ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು.

ಜನಸಾಮಾನ್ಯರೊಂದಿಗೆ ತನ್ನನ್ನು ಗುರುತಿಸಿಕೊಂಡ ಮಹಾನ್ ಕ್ರಾಂತಿಕಾರಿ, ಸ್ವಾತಂತ್ರ್ಯ ಹೋರಾಟಗಾರ

ಕಾಮ್ರೇಡ್ ಶಿವವರ್ಮಾ



ಜನವರಿ ೧೦ ನಮಗೆಲ್ಲ ಒಂದು ಬಹಳ ಬೇಸರದ ದಿನ. ಹುತಾತ್ಮರಾದ ಚಂದ್ರಶೇಖರ್ ಆಝಾದ್, ಭಗತ್ ಸಿಂಗ್ ನೇತೃತ್ವದ ರಾಷ್ಟ್ರೀಯ ಕ್ರಾಂತಿಕಾರಿ ಆಂದೋಲನದ ಕೊನೆಯ ಕೊಂಡಿ ಎನ್ನಬಹುದಾದ ಕಾಮ್ರೇಡ್ ಶಿವವರ್ಮಾ ನಮ್ಮನ್ನಗಲಿದರು. ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಮಾತ್ರವಲ್ಲ, ಸ್ವಾತಂತ್ರ್ಯದ ನಂತರವೂ ಕೂಡಾ ಕೊನೆಯ ಗಳಿಗೆಯವರೆಗೂ ದುಡಿಯುವ ಜನಗಳ ಹಕ್ಕುಗಳಿಗಾಗಿ, ಜನತಾ ಪ್ರಜಾಪ್ರಭುತ್ವಕ್ಕಾಗಿ, ಸಮಾಜವಾದಕ್ಕಾಗಿ ಹೋರಾಡಿದ ಒಬ್ಬ ಸಮರ್ಪಿತ ಕ್ರಾಂತಿಕಾರಿ ಇನ್ನು ನಮ್ಮ ಮುಂದಿಲ್ಲ.

ಕಾಂ|| ಶಿವವರ್ಮಾರದ್ದು ಎಂತಹ ಸತ್ವಶಾಲಿ ವ್ಯಕ್ತಿತ್ವ ಎಂಬುದನ್ನು ಅವರು ೯೩ರ ಇಳಿವಯಸ್ಸಿನಲ್ಲಿ ನಮ್ಮನ್ನಗಲುವ ಒಂದು ವರ್ಷದ ಹಿಂದಿನವರೆಗೂ ಸಕ್ರಿಯರಾಗಿ ದುಡಿದರು ಎಂಬ ಸಂಗತಿಯೇ ಸಾರುತ್ತದೆ ಎನ್ನುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರ ಲೇಖನಿಯಿಂದ ಈ ಮಹಾನ್ ಕ್ರಾಂತಿಕಾರಿಯ ಜೀವನದ ಒಂದು ಕಿರುಚಿತ್ರ 'ಕಾಂ|| ಶಿವವರ್ಮಾ ರವರ ಜೀವನ ಚರಿತ್ರೆ' ನಮ್ಮ ಸ್ವಾತಂತ್ರ್ಯದ ಚಿನ್ನದ ಹಬ್ಬದ ವೇಳೆ ನೆನಪಿಸಿ ಕೊಳ್ಳಬೇಕಾದ ಸ್ವಾತಂತ್ರ್ಯ ಆಂದೋಲನದ ಒಂದು ಮುಖ್ಯ ಪ್ರವಾಹದ ಚರಿತ್ರೆ ಕೂಡ. ನಮ್ಮ ಈಗಿನ ಆಳರಸರು ಮರೆಮಾಡಬಯಸುವ ಇತಿಹಾಸ.

ಉತ್ತರ ಪ್ರದೇಶದ ಹರ್ದೋಯಿ ಜಿಲ್ಲೆಯಲ್ಲಿ ಫೆಬ್ರವರಿ 1904 ರಂದು ಜನಿಸಿದ ಶಿವವರ್ಮಾ ಕೇವಲ 17 ವರ್ಷದವರಿದ್ದಾಗಲೇ ಮಹಾತ್ಮ ಗಾಂಧೀಜಿಯ ಕರೆಗೆ ಓಗೊಟ್ಟು ಅಸಹಕಾರ ಆಂದೋಲನಕ್ಕೆ (1921-22) ಧುಮುಕಿದರು. ಆದರೆ ಗಾಂಧೀಜಿ ಚೌರಿಚೌರಾದ ಘಟನೆಯ ಹುಸಿನೆಪವೊಡ್ಡಿ ಆಂದೋಲನವನ್ನು ಹಿಂತೆಗೆದುಕೊಂಡಾಗ ಇಡೀ ದೇಶಕ್ಕೆ ಮಂಕು ಕವಿದಂತಾಯಿತು. ಹಿಂದಿನ ತಲೆಮಾರಿನ ರಾಷ್ಟ್ರೀಯ ಕ್ರಾಂತಿಕಾರಿಗಳು ತಮ್ಮ ಚಳುವಳಿಯನ್ನು ಸ್ಥಗಿತಗೊಳಿಸಿ ಬಹಳಷ್ಟು ನಿರೀಕ್ಷೆಯಿಂದ 'ಒಂದು ವರ್ಷದಲ್ಲಿ ಸ್ವರಾಜ್ಯ' ಎಂಬ ಗಾಂಧೀಜಿಯ ಈ ಪ್ರಯೋಗದಲ್ಲಿ ಪಾಲುಗೊಂಡಿದ್ದರು. ಈಗ ನಿರಾಶರಾಗಿ ಮತ್ತೆ ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ಪುನರಾರಂಭಿಸಿದರು. ಉತ್ತರ ಪ್ರದೇಶದಲ್ಲಿಯೂ ಈ ಹಿಂದೆ ಮೊದಲ ಲಾಹೋರ್ ಪಿತೂರಿ ಮೊಕದ್ದಮೆ(1915-17)ಯಲ್ಲಿ ಗಡೀಪಾರು ಶಿಕ್ಷೆ ಅನುಭವಿಸಿ ಮೊದಲ ಮಹಾಯುದ್ಧದ ನಂತರ ನೀಡಿದ ಸಾರ್ವತ್ರಿಕ ಕ್ಷಮಾದಾನದಲ್ಲಿ ಬಿಡುಗಡೆ ಹೊಂದಿ ಬಂದಿದ್ದ ಸಚೀಂದ್ರನಾಥ್ ಸನ್ಯಾಲ್ ಯುವಜನರ ಒಂದು ಸಣ್ಣ ಗುಂಪನ್ನು ಸೇರಿಸಿ 1925ರಲ್ಲಿ 'ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್'(HRA) ಆರಂಭಿಸಿದರು.

ಆದರೆ 1925 ರಲ್ಲಿ ನಡೆದ ಕಾಕೋರಿ ರೈಲು ತಡೆ ಘಟನೆ, ಅದರಿಂದ ಬ್ರಿಟಿಶರು ಹೇರಿದ ಪಿತೂರಿ ಮೊಕದ್ದಮೆಯಿಂದಾಗಿ HRA ಚೂರುಚೂರಾಯಿತು. ಇದರಲ್ಲಿದ್ದ ರಾಮ್ ಪ್ರಸಾದ್ ಬಿಸ್ಮಿಲ್, ಅಶ್ರಫುಲ್ಲಾ, ರೋಶನ್ ಸಿಂಗ್ ಮತ್ತು ರಾಜೇಶ್ ಲಾಹಿರಿಯವರಿಗೆ ಮರಣ ದಂಡನೆಯಾಯಿತು. ಸಚಿನ್ ಸನ್ಯಾಲ್ ಮತ್ತು ಇತರ ಹಲವರಿಗೆ ಆಜೀವ ಗಡಿಪಾರು ಶಿಕ್ಷೆಯಾಯಿತು. ಇನ್ನು ಕೆಲವರಿಗೆ 3 ರಿಂದ 14 ವರ್ಷ ಜೈಲು ಶಿಕ್ಷೆಯಾಯಿತು. ಚಂದ್ರಶೇಖರ್ ಆಝಾದ್ ಮತ್ತು ಮುಕುಂದೀ ಲಾಲ್ ತಲೆಮರೆಸಿಕೊಂಡಿದ್ದಾರೆಂದು ಸಾರಲಾಯಿತು.

ಕ್ರಾಂತಿಕಾರಿ ಚಟುವಟಿಕೆಗಳತ್ತ

ಈ ದಿನಗಳಲ್ಲೇ ಕಾನ್‌ಪುರದಲ್ಲಿ ಓದುತ್ತಿದ್ದ ಶಿವಮೂರ್ತಿ ಮತ್ತು ಜಯದೇವ ಕಪೂರ್ ಚಂದ್ರಶೇಖರ್ ಆಝಾದ್ ಹಾಗೂ ಭಗತ್ ಸಿಂಗ್‌ರ ಸಂಪರ್ಕಕ್ಕೆ ಬಂದರು. ದಿಲ್ಲಿಯ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ ಸೆಪ್ಟೆಂಬರ್ 1927 ರಲ್ಲಿ ನಡೆದ ಒಂದು ಗುಪ್ತ ಸಭೆಯಲ್ಲಿ HRAಗೆ ಮತ್ತೆ ಜೀವ ತುಂಬಲಾಯಿತು. ಹಿಂದುಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್(HSRA) ಎಂಬ ಹೊಸ ಹೆಸರನ್ನು ಅದಕ್ಕೆ ನೀಡಲಾಯಿತು. ಇದೊಂದು ಹೊಸ ರೀತಿಯ ಸಂಘಟನೆಯಾಗಿತ್ತು. ಆಗ ಇನ್ನೆರಡು ಕ್ರಾಂತಿಕಾರಿ ಚಟುವಟಿಕೆಗಳ ಕೇಂದ್ರಗಳಾದ ಬಂಗಾಳ, ಮಹಾರಾಷ್ಟ್ರದಲ್ಲಿ ಸಕ್ರಿಯವಾಗಿದ್ದ ಗುಂಪುಗಳಿಗಿಂತ ಬಹಳ ಭಿನ್ನವಾಗಿತ್ತು. ಉತ್ತರದಲ್ಲಿ ಪಂಜಾಬಿನಿಂದ ಬಿಹಾರದವರೆಗೆ, ದಕ್ಷಿಣದಲ್ಲಿ ಮಧ್ಯ ಭಾರತದವರೆಗೆ HSRA ಚಟುವಟಿಕೆಗಳು ಹರಡಿದವು. ಶಿವವರ್ಮಾ ಸಂಯುಕ್ತ ಪ್ರಾಂತ್ಯಗಳ(ಯು.ಪಿ) ಪ್ರತಿನಿಧಿಯಾಗಿ ಈ ಸಂಘಟನೆಯ ಕೇಂದ್ರ ಸಮಿತಿಗೆ ಆಯ್ಕೆಗೊಂಡರು. ಅವರನ್ನು HSRA ರಾಯಭಾರಿಯಾಗಿ ಬಂಗಾಳಕ್ಕೂ ಕಳಿಸಲಾಯಿತು. ಆದರೆ ಕೆಲವು ಕಾರಣಗಳಿಂದಾಗಿ ಬಂಗಾಳದ ಕ್ರಾಂತಿಕಾರಿ ಗುಂಪು HSRAಯೊಂದಿಗೆ ವಿಲೀನಗೊಳ್ಳಲು ಒಪ್ಪಲಿಲ್ಲ.

ಈ ಸಂಘಟನೆಯ ಹೆಸರಲ್ಲಿ ಸೇರಿಸಿದ 'ಸೋಶಲಿಸ್ಟ್' ಪದ ಯುವಜನರಲ್ಲಿ ಆಗಷ್ಟೇ ಮೂಡಿಬರುತ್ತಿದ್ದ ಹೊಸ ಆಲೋಚನಾ ದಿಕ್ಕನ್ನು ಬಿಂಬಿಸುವ ಪದವಾಗಿತ್ತು.

ಆ ನಂತರ ನಡೆದ ಘಟನೆಗಳೆಲ್ಲಾ ಪ್ರತಿಯೊಬ್ಬ ಭಾರತೀಯ ಹೆಮ್ಮೆಪಡಬಹುದಾದ ಚರಿತ್ರೆಯ ಭಾಗವಾಗಿವೆ. ಪೋಲೀಸ್ ಲಾಠಿಯೇಟಿನಿಂದ ಲಾಲಾ ಲಜಪತ್ ರಾಯರ ಸಾವು, ಅದರ ಸೇಡು ತೀರಿಸಿಕೊಳ್ಳಲು ಬ್ರಿಟಿಷ್ ಪೋಲೀಸ್ ಅಧಿಕಾರಿ ಸೌಂಡರ್ಸ್ ಹತ್ಯೆ, ಸೆಂಟ್ರಲ್ ಅಸೆಂಬ್ಲಿ ಕಟ್ಟಡ(ಈಗಿನ ಸಂಸದ್ ಭವನ)ದಲ್ಲಿ ಬಾಂಬ್ ಎಸೆತ, ಎರಡನೇ ಲಾಹೋರ್ ಪಿತೂರಿ ಮೊಕದ್ದಮೆ ಮತ್ತು ಇನ್ನೂ ಹತ್ತಾರು ಪೂರಕ ಮೊಕದ್ದಮೆಗಳು. ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್‌ರಿಗೆ ಗಲ್ಲು ಶಿಕ್ಷೆ ಇತ್ಯಾದಿ.

ಎರಡನೇ ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಶಿವವರ್ಮಾ, ಜಯದೇವ್ ಕಪೂರ್, ಮಹಾವೀರ್ ಸಿಂಗ್, ಡಾ|| ಗಯಾಪ್ರಸಾದ್, ಪಂಡಿತ್ ಕಿಶೋರಿ ಲಾಲ್ ಮತ್ತಿತರ ಕೆಲವರಿಗೆ ಆಜೀವ ಗಡಿಪಾರು ಶಿಕ್ಷೆ ವಿಧಿಸಲಾಯಿತು.

ಶಿವವರ್ಮಾರನ್ನು ಮೊದಲು ಈಗ ಆಂಧ್ರಪ್ರದೇಶದಲ್ಲಿರುವ ರಾಜಮಹೇಂದ್ರಿಗೆ, ಅಲ್ಲಿಂದ ಕುಖ್ಯಾತ ಅಂಡಮಾನ್ ಜೈಲಿಗೆ ಕಳಿಸಲಾಯಿತು. ಈ ದ್ವೀಪದಿಂದ ಇವರು ಯಾರೂ ಜೀವಂತ ಭಾರತಕ್ಕೆ ಮರಳಿ ಬರುವುದಿಲ್ಲ ಎಂಬುದು ಬ್ರಿಟಿಷರ ನಿರೀಕ್ಷೆಯಾಗಿತ್ತು.

ಲಾಹೋರ್ ಮೊಕದ್ದಮೆ ಪೂರ್ಣಗೊಳಿಸುವ ಮೊದಲು ಆಪಾದಿತರು ಕೂಡಾ ದೀರ್ಘಕಾಲ ಉಪವಾಸ ಸತ್ಯಾಗ್ರಹಗಳನ್ನು ನಡೆಸಿದರು. ಜೈಲುಗಳ ಸುಧಾರಣೆಯಾಗಬೇಕು ಎಂದು ಬೇಡಿಕೆಯನ್ನಿಟ್ಟರು. ಆದರೆ ಇದು ವಾಸ್ತವವಾಗಿ ಜೈಲು ಜೀವನದ ಪರಿಸ್ಥಿತಿಗಳಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನು ಹೊಸ ರೂಪಗಳಲ್ಲಿ ಮುಂದುವರಿಸುವ ಪ್ರಯತ್ನವಾಗಿತ್ತು. ಇಂತಹ ಒಂದು ಉಪವಾಸ ಮುಷ್ಕರದಲ್ಲೇ 63ನೇ ದಿನ ಒಬ್ಬ ಕ್ರಾಂತಿಕಾರಿ ಜತಿನ್ ದಾಸ್ ಹುತಾತ್ಮರಾದರು. ಶಿವವರ್ಮಾ ಕೂಡಾ ಇಂತಹ ಒಂದು ಉಪವಾಸ ಮುಷ್ಕರದಲ್ಲಿ ಸಾವಿನ ಅಂಚಿಗೆ ಬಂದಿದ್ದರು.

ಬ್ರಿಟಿಷ್ ಜೈಲುಗಳಲ್ಲಿ ವೈಚಾರಿಕ ಕ್ರಾಂತಿಯ ಪ್ರಕ್ರಿಯೆ

ಈ ವಿವಿಧ ಜೈಲುಗಳಲ್ಲಿ ಮತ್ತು ಅಂಡಮಾನ್‌ನಲ್ಲಿ ಕೂಡಾ ಈ ಯುವ ಕ್ರಾಂತಿಕಾರಿಗಳು ಒಂದು ಸಾಕ್ಷಾತ್ ವೈಚಾರಿಕ ಕ್ರಾಂತಿಗೊಳಪಡುತ್ತಿದ್ದ ಸಮಯವದು. ಈ ಪ್ರಕ್ರಿಯೆ ಜೈಲುಗಳ ಹೊರಗೆಯೇ ಆರಂಭವಾಗಿತ್ತು. ಭಗತ್ ಸಿಂಗರೇ ಇದನ್ನು ಆರಂಭಿಸಿ ಅದರ ನೇತೃತ್ವವನ್ನು ವಹಿಸಿದ್ದರು. ಜೈಲುಗಳಲ್ಲಿ ಇದು ಮುಂದುವರಿಯಿತು. ನಿರಂತರ ಅಧ್ಯಯನ, ಚರ್ಚೆ, ಆತ್ಮನಿರೀಕ್ಷಣೆ, ಕ್ರಾಂತಿಕಾರಿ ಆಂದೋಲನದ ವಿಮರ್ಶೆ ಇವೆಲ್ಲವುಗಳ ಮೂಲಕ ಕೊನೆಗೆ ಬಹಳಷ್ಟು ಕ್ರಾಂತಿಕಾರಿಗಳು ಜೈಲುಗಳಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದತ್ತ ಹೊರಳಿದರು. ಆ ಸಿದ್ಧಾಂತವನ್ನು ಅಂಗೀಕರಿಸಿದರು. ಸ್ವತಃ ಕಾಂ|| ಶಿವವರ್ಮಾರವರ ಲೇಖನಗಳಲ್ಲಿ, ವಿಜಯಕುಮಾರ್ ಸಿನ್ಹಾರವರ 'ಭಾರತದ ಬ್ಯಾಸ್ಟಿಲ್ ಅಂಡಮಾನ್‌ನಲ್ಲಿ', ಮನ್ಮಥನಾಥ ಗುಪ್ತರವರ ಮೂರು ಭಾಗಗಳ ಹಿಂದೀ ಗ್ರಂಥ 'ಸಿಂಹಾವಲೋಕನ' ಮತ್ತಿತರ ಕ್ರಾಂತಿಕಾರಕ ಬರಹಗಳಲ್ಲಿ ಈ ಪ್ರಕ್ರಿಯೆಯ ಚಿತ್ರಣವನ್ನು ಕಾಣಬಹುದು. ಈ ಪ್ರಕ್ರಿಯೆ ಅಂಡಮಾನ್‌ನಲ್ಲಿ ಉತ್ತುಂಗಕ್ಕೇರಿತ್ತು. ಅಲ್ಲಿನ ಖೈದಿಗಳು 'ಕಮ್ಯುನಿಸ್ಟ್ ಕನ್ಸೋಲಿಡೇಶನ್'(ಕಮ್ಯುನಿಸ್ಟ್ ಕ್ರೋಢೀಕರಣ) ಎಂಬ ಒಂದು ಹೊಸ ಸಂಘಟನೆಯನ್ನು ಕಟ್ಟಿಕೊಂಡರು. ಅಲ್ಲಿದ್ದ 500ಕ್ಕೂ ಹೆಚ್ಚು ಖೈದಿಗಳಲ್ಲಿ ಹತ್ತಾರು ಮಂದಿಯನ್ನು ಬಿಟ್ಟು ಮತ್ತೆಲ್ಲರೂ ಇದನ್ನು ಸೇರಿಸಿಕೊಂಡರು.

ಶಿವವರ್ಮಾ ಈ ಸಂಘಟನೆಯನ್ನು ರಚಿಸುವಲ್ಲಿ ಮತ್ತು ಅದರ ಮುಖವಾಣಿ 'ಕಾಲ್'(ಕರೆ) ಎಂಬ ಪತ್ರಿಕೆಯನ್ನು ಸಂಪಾದಿಸುವಲ್ಲಿ ಒಂದು ಪ್ರಧಾನ ಪಾತ್ರ ವಹಿಸಿದರು. ಈ ಸಂಘಟನೆ ತಾನು ಭಾರತ ಕಮ್ಯುನಿಸ್ಟ್ ಪಕ್ಷದ ಅನುಯಾಯಿ ಎಂದು ಘೋಷಿಸಿಕೊಂಡಿತು.

ಅಂಡಮಾನ್ ಜೈಲಿನಲ್ಲಿ ಶಿವವರ್ಮಾ ಮತ್ತೊಮ್ಮೆ ಉಪವಾಸ ಮುಷ್ಕರದಲ್ಲಿ ಸಾವಿನ ಅಂಚಿಗೆ ತಲುಪಿದರು. ಈ ಮುಷ್ಕರ ಮಹಾವೀರ್ ಸಿಂಗ್, ಮೋಹಿತ್ ಮೈತ್ರ ಮತ್ತು ಮೋಹನ್ ಕಿಶೋರ್ ಎಂಬ ಕ್ರಾಂತಿಕಾರಿಗಳನ್ನು ಬಲಿತೆಗೆದುಕೊಂಡಿತು.

1937 ರಲ್ಲಿ ಹಲವಾರು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳು ರಚನೆಗೊಂಡು ನಂತರ ಅಂಡಮಾನ್ ದ್ವೀಪದ ಜೈಲಿನಲ್ಲಿದ್ದವರನ್ನು ಭಾರತಕ್ಕೆ ತರಬೇಕೆನ್ನುವ ಬೇಡಿಕೆ ಒಂದು ಸಾಮಾಜಿಕ ಆಂದೋಲನವಾಗಿ ಬೆಳೆಯುವ ಭಯ ಬ್ರಿಟಿಷರನ್ನು ಆವರಿಸಿತು. ಅವರು ಮಣಿಯಲೇ ಬೇಕಾಯಿತು. ಶಿವವರ್ಮಾ ಅಲಹಬಾದಿನ ನೈನಿ ಜೈಲಿಗೆ ವರ್ಗಾಯಿಸಲ್ಪಟ್ಟರು. ಅವರ ಆರಂಭದ ಬರಹಗಳು ಪ್ರಕಟವಾದದ್ದು ಈ ಅವಧಿಯಲ್ಲೇ.

1945ರ ವೇಳೆಗೆ ಹಲವಾರು ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡಲಾಯಿತಾದರೂ ಶಿವವರ್ಮಾ, ಜೈದೇವ್ ಕಪೂರ್, ಡಾ| ಗಯಾ ಪ್ರಸಾದ್ ಮತ್ತು ಪಂಡಿತ್ ಕಿಶೋರಿ ಲಾಲ್‌ರನ್ನು ಸ್ವಾತಂತ್ರ್ಯ ದೊರಕುವವರೆಗೆ ಬಿಡುಗಡೆ ಮಾಡಲಿಲ್ಲ.

ಮತ್ತೆ ಹೋರಾಟಗಳ ನಡುವೆ

ಸ್ವಾತಂತ್ರ್ಯಾನಂತರ ಜೈಲಿನಿಂದ ಹೊರಬರುತ್ತಿದ್ದಂತೆಯೇ ಮತ್ತೆ ಶಿವವರ್ಮಾ ಪೂರ್ಣ ಚೈತನ್ಯದಿಂದ ಸಾಮೂಹಿಕ ಆಂದೋಲನಗಳಲ್ಲಿ ಧುಮುಕಿದರು. ತನ್ನನ್ನು ಸಂಪೂರ್ಣವಾಗಿ ಪಕ್ಷಕ್ಕೆ ಸಮರ್ಪಿಸಿಕೊಂಡರು. 1948ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಉತ್ತರ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಅದು ಮಹಾನ್ ತೆಲಂಗಾಣಾ ಸಶಸ್ತ್ರ ರೈತ ಹೋರಾಟ ಉತ್ತುಂಗ ಮಟ್ಟದಲ್ಲಿದ್ದ ಸಮಯ. ಇದರಿಂದಾಗಿ ಕಮ್ಯುನಿಸ್ಟ್ ಪಕ್ಷ ದೇಶಾದ್ಯಂತ ನೆಹರೂ ಸರಕಾರ ಹರಿಯಬಿಟ್ಟ ದಮನ ಚಿತ್ರಣವನ್ನು ಎದುರಿಸಲೇಬೇಕಾಗಿತ್ತು. ಆಗ ಬೇರೆಡೆಗಳಿಗೆ ಹೋಲಿಸಿದರೆ ಉತ್ತರ ಪ್ರದೇಶದಲ್ಲಿ ಪಕ್ಷದ ಘಟಕ ಸಾಕಷ್ಟು ಬಲಶಾಲಿಯಾಗಿತ್ತು. ಈ ಹಿಂದೆ ಬ್ರಿಟಿಷರು ಈ ರಾಜ್ಯದಲ್ಲಿ ಬೆಳೆದು ಬರುತ್ತಿದ್ದ ಕಮ್ಯುನಿಸ್ಟ್ ಆಂದೋಲನವನ್ನು ಮೊಳಕೆಯಲ್ಲೇ ಚಿವುಟಿಹಾಕಲು ಎರಡು ಪಿತೂರಿ ಮೊಕದ್ದಮೆಗಳನ್ನು ಹೇರಿದ್ದರು. ಕಾನ್ಪುರ ಪಿತೂರಿ ಮೊಕದ್ದಮೆ ಮತ್ತು ಮೇರಠ್ ಪಿತೂರಿ ಮೊಕದ್ದಮೆ. ಕಾನ್ಪುರ ಕಾರ್ಮಿಕ ಆಂದೋಲನದ ಒಂದು ಬಲಾಢ್ಯ ಕೋಟೆಯಾಗಿತ್ತು. ಘಾಜಿಪುರ್, ಅಜಂಗಡ್ ಇತ್ಯಾದಿಗಳು ಸಮರಧೀರ ರೈತ ಆಂದೋಲನದ ಕೇಂದ್ರಗಳಾಗಿ ಮೂಡಿಬಂದಿದ್ದವು.

ಆದ್ದರಿಂದ ಸಹಜವಾಗಿಯೇ ಪಕ್ಷದ ಉತ್ತರ ಪ್ರದೇಶದ ಘಟಕ ಕೂಡಾ ಸರಕಾರದ ದಮನಕ್ಕೆ ಗುರಿಯಾಯಿತು. ಅಂತಹ ಕಠಿಣ ದಿನಗಳಲ್ಲಿ ಶಿವವರ್ಮಾರವರ ನೇತೃತ್ವ ಅವರ ಸಂಘಟನಾ ಚಾತುರ್ಯ ಮತ್ತು ಸಾಮರ್ಥ್ಯಗಳನ್ನು ಸಾಬೀತು ಪಡಿಸಿತು.

ಈ ಅವಧಿಯಲ್ಲೇ ಮೊದಲಬಾರಿಗೆ ಶಿವವರ್ಮಾರನ್ನು ಸ್ವತಂತ್ರ ಭಾರತದ ಸರಕಾರವೂ ಜೈಲಿಗಟ್ಟಿತು. ನಂತರ 1962 ಹಾಗೂ 1965ರಲ್ಲಿ ಸರಕಾರ ಮಾರ್ಕ್ಸ್‌ವಾದಿಗಳ ವಿರುದ್ಧ ಧಾಳಿ ಪ್ರಾರಂಭಿಸಿದಾಗ ಶಿವವರ್ಮಾ ಮತ್ತೆ ಜೈಲುವಾಸ ಅನುಭವಿಸಬೇಕಾಯಿತು.

ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಮತ್ತು ಭಾರತೀಯ ಕ್ರಾಂತಿಯ ತಂತ್ರಗಳ, ಪ್ರಶ್ನೆಗಳ ಮೇಲೆ ಪಕ್ಷದೊಳಗೆ 1957 ರಲ್ಲಿ ಆಂತರಿಕ ಹೋರಾಟ ಆರಂಭವಾದಾಗ ಅವರನ್ನು ಉತ್ತರ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಸ್ಥಾನದಿಂದ ತೆಗೆದುಹಾಕಲಾಯಿತು. ಆದರೂ ಎಂದೂ ಬೇಸರಿಸಿಕೊಳ್ಳದೆ ಪಕ್ಷ ವಹಿಸಿದ ಜವಾಬ್ದಾರಿಗಳನ್ನು ಅವರು ನೆರವೇರಿಸಿದರು. 1950ರ ದಶಕದಲ್ಲಿ ಅವರು ಹಿಂದಿಯ ಪ್ರಖ್ಯಾತ ಪ್ರಗತಿಪರ ಸಾಹಿತ್ಯಿಕ ಪತ್ರಿಕೆ 'ನಯಾ ಪಥ್' (ಹೊಸದಾರಿ)ಗೆ ಸಂಪಾದಕರಾಗಿ ಕೆಲಸ ಮಾಡಿ ಹಲವಾರು ಪ್ರಗತಿಪರ ಲೇಖಕರನ್ನು ಒಂದುಗೂಡಿಸಿದರು.

ನಂತರ ಅವರು ನಯಾ ಸವೇರಾ(ಹೊಸ ಮುಂಜಾವು) ಹಾಗೂ ಪಕ್ಷದ ಕೇಂದ್ರ ಸಮಿತಿಯ ಪತ್ರಿಕೆ 'ಲೋಕ್ ಲಹರ್'(ಜನತಾ ಪ್ರವಾಹ)ದ ಸಂಪಾದಕೀಯ ಕೆಲಸವನ್ನು ಮಾಡಿದರು.

ಪಕ್ಷವನ್ನು ನವೆಂಬರ್ 1964 ರಲ್ಲಿ ಪುನರ್‌ಸಂಘಟಿಸಿದಾಗ ಶಿವವರ್ಮಾ ಸಿಪಿಐ(ಎಂ) ಪರವಹಿಸಿದರು. ಸಿಪಿಐ(ಎಂ)ನ ಉತ್ತರ ಪ್ರದೇಶ ರಾಜ್ಯ ಸಮಿತಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿಗೆ ಅವರು ಆಯ್ಕೆಗೊಂಡರು. ನಂತರ 1967ರಲ್ಲಿ ಹಾಗೂ ತದ ನಂತರ ದುಸ್ಸಾಹಸವಾದಿಗಳ ಸವಾಲನ್ನು ಕೂಡಾ ಪರಿಷ್ಕರಣವಾದಿಗಳನ್ನು ಎದುರಿಸಿದ ರೀತಿಯಲ್ಲೇ ಎದುರಿಸಿ ನಿಂತರು.

ಕಳೆದ ಒಂದು ದಶಕದಲ್ಲಿ ಅವರ ಆರೋಗ್ಯ ಹದಗೆಡಲಾರಂಭಿಸಿದಾಗ ಅವರ ಕೋರಿಕೆಯ ಮೇರೆಗೆ ಅವರನ್ನು ಪಕ್ಷದ ಜವಾಬ್ದಾರಿಗಳಿಂದ ಮುಕ್ತಗೊಳಿಸಲಾಯಿತು. ಆದರೂ ಇತರ ರಂಗಗಳಲ್ಲಿ ಅವರು ಕೆಲಸ ಮುಂದುವರಿಸಿದರು. ಲಕ್ನೌದಲ್ಲಿ 'ಶಹೀದ್ ಸ್ಮಾರಕ' ರಚಿಸಿ ಸಂಶೋಧನೆ ಮತ್ತು ಪ್ರಕಟಣೆಯ ಕೆಲಸ ಕೈಗೆತ್ತಿಕೊಂಡರು. ತನ್ನನ್ನು ಸಂಪೂರ್ಣವಾಗಿ ಅದಕ್ಕೆ ಸಮರ್ಪಿಸಿಕೊಂಡರು. ಅದಕ್ಕಾಗಿ ದೇಶಾದ್ಯಂತ ತಿರುಗಾಡಿ ಕ್ರಾಂತಿಕಾರಿಗಳ ಲೇಖನಗಳು, ಫೋಟೋಗಳು ಇತ್ಯಾದಿಗಳನ್ನು ಸಂಗ್ರಹಿಸಿದರು. ಈ ಕೆಲಸಕ್ಕೆ ಅವರು ಲಂಡನ್‌ನ ಬ್ರಿಟಿಶ್ ಮ್ಯೂಸಿಯಂಗೆ ಕೂಡಾ ಹೋದರು. ಈ ಹಿಂದೆ ಭಗತ್ ಸಿಂಗರ ಲೇಖನಗಳು, ಭಾಷಣಗಳು, ಪತ್ರಗಳು ಇತ್ಯಾದಿಗಳನ್ನು ಸಂಗ್ರಹಿಸಿ ನೈಜ ದಸ್ತಾವೇಜುಗಳನ್ನು ಆರಿಸಿ ತೆಗೆದಂತೆ ಈಗ ಇತರ ಕ್ರಾಂತಿಕಾರಿಗಳನ್ನು ಕುರಿತಂತೆಯೂ ಮಾಹಿತಿ ಸಂಗ್ರಹ ಮಾಡಿದರು.

ಹೀಗೆ ಕೊನೆಯುಸಿರಿನವರೆಗೂ ಶಿವವರ್ಮಾ ಭಗತ್ ಸಿಂಗ್ ತನ್ನ 'ಯುವ ರಾಜಕೀಯ ಕಾರ್ಯಕರ್ತರಿಗೆ' ಎಂಬ ಶಿರೋನಾಮೆಯ ಲೇಖನದಲ್ಲಿ ಹೇಳಿದಂತೆ ಅನುಸರಿಸಿ ತೋರಿಸಿದರು. ಭಗತ್ ಸಿಂಗರ ಈ ಲೇಖನ ಸುಮಾರಾಗಿ ಅವರ ಕೊನೆಯ ಪತ್ರವೂ ಆಗಿತ್ತು. ಜೈಲಿನಿಂದ ಅದನ್ನು ಗುಪ್ತವಾಗಿ ಹೊರತರಲಾಗಿತ್ತು.

ಒಬ್ಬ ಮಹಾನ್ ಮಾರ್ಕ್ಸ್‌ವಾದಿಯಾಗಿ ಶಿವವರ್ಮಾ ತನ್ನ ಶಕ್ತಿಶಾಲಿ ಲೇಖನಿ, ಹಿಂದೀ ಭಾಷೆಯ ಮೇಲಿನ ತನ್ನ ಹಿಡಿತವನ್ನು ಬಳಸಿಕೊಂಡರು. ಅವರ ಮಾರ್ಕ್ಸ್‌ವಾದಿ ಪರಿಚಯದಲ್ಲಿನ ಐದು ಕಿರುಹೊತ್ತಿಗೆಗಳು ಲಕ್ಷಗಟ್ಟಲೆ ಪ್ರತಿಗಳು ಮಾರಾಟವಾಗಿವೆ. ಬೇರೆ ಭಾಷೆಗಳಲ್ಲಿ ಭಾಷಾಂತರಗೊಂಡಿವೆ. ಅವರ 'ಸಂಸ್ಮೃತಿಯಾಂ'(ನೆನಪುಗಳು) ಹಾಗೂ 'ಮೌತ್ ಕೀ ಇಂತ್‌ಝಾರ್ ಮೇ"(ಸಾವಿನ ನಿರೀಕ್ಷೆಯಲ್ಲಿ) ನಮ್ಮ ಕ್ರಾಂತಿಕಾರಿಗಳ ಕಠಿಣ ಬದುಕನ್ನು ಚಿತ್ರಿಸಿವೆಯಷ್ಟೇ ಅಲ್ಲ, ಯುವ ಪೀಳಿಗೆಗೆ ಸ್ಫೂರ್ತಿದಾಯಕವಾದ ಒಂದು ದೊಡ್ಡ ಸ್ರೋತ.

ಅವರು ಸಂಪಾದಿಸಿದ 'ಶಹೀದ್ ಭಗತ್‌ಸಿಂಗ್ ಅವರ ಆಯ್ದ ಬರಹಗಳು' ಒಂದು ಮಹತ್ವಪೂರ್ಣ ಕಾರ್ಯ. ಇದು ಭಗತ್‌ಸಿಂಗ್‌ರ ಮರುಶೋಧನೆಯೆಂದೇ ಹೇಳಬಹುದು. ಬಹಳ ಕಾಲದಿಂದ ಪಟ್ಟಭದ್ರ ಹಿತಾಸಕ್ತಿಗಳು ದಮನ ಮಾಡುತ್ತಿದ್ದ ಅವರ ವಿಚಾರಗಳನ್ನು, ಆದರ್ಶಗಳನ್ನು ಜನತೆಯ ಮುಂದಿಡಲು ಪ್ರಯತ್ನಿಸಿದರು. ಮಾರ್ಚ್ 23 ರಂದಷ್ಟೇ ಅದರ ಎರಡನೇ ಆವೃತ್ತಿ ಪ್ರಕಟಗೊಂಡಿತ್ತು. ಮೊದಲ ಆವೃತ್ತಿಗೆ ಕಾಂ|| ಬಿ.ಟಿ.ಆರ್. ಬರೆದ ಮುನ್ನುಡಿಯೊಂದಿಗೆ ಈ ಎರಡನೇ ಆವೃತ್ತಿಗೆ ನಾನು ಮುನ್ನುಡಿ ಬರೆಯುವಂತೆ ಮಾಡಿದರು ಕಾಂ|| ಶಿವವರ್ಮಾ.

ನಿಜವಾಗಿಯೂ ಕಾಂ|| ಶಿವವರ್ಮಾರದ್ದು ಒಂದು ಮಹಾನ್ ಬದುಕು. ನಮ್ಮ ಶ್ರಮಜೀವಿ ಜನಸಮೂಹಗಳಿಗಾಗಿ ಸಂಪೂರ್ಣವಾಗಿ ಅವರು ಅದನ್ನು ಬಳಸಿಕೊಂಡರು. ಮಾನವನಿಗೆ ಸಿಗುವುದು ಒಂದೇ ಬಾಳು. ಬಹಳಷ್ಟು ಮಂದಿ ಅದರ ಸದುಪಯೋಗ ಮಾಡಿಕೊಳ್ಳುವುದಿಲ್ಲ. ಶಿವವರ್ಮಾ ಅಂತವರಾಗಿರಲಿಲ್ಲ. ಯಾವುದೇ ಆಕಾಂಕ್ಷೆ ಆಕ್ಷೇಪಗಳಿಲ್ಲದೆ, ಜನಸಮೂಹಗಳೊಂದಿಗೆ ತನ್ನನ್ನು ಗುರುತಿಸಿಕೊಂಡು ಅವರು ಚಳುವಳಿಗಳಲ್ಲಿ ದುಡಿದರು. ಅವರು ಇನ್ನು ಮುಂದೆ ನಮ್ಮೊಂದಿಗೆ ಇಲ್ಲವಾದರೂ ದೀರ್ಘಕಾಲದವರೆಗೆ ಅವರ ಬದುಕು ನಮ್ಮೆಲ್ಲಾ ಸಂಗಾತಿಗಳು, ಬೆಂಬಲಿಗರು ಮತ್ತು ಜನಸಾಮಾನ್ಯರಿಗೆ ಸ್ಫೂರ್ತಿ ನೀಡುವಂತದ್ದು. □

“ನಮ್ಮ ಲಾಭಕ್ಕಡ್ಡಿಯಾಗುವುದಾದರೆ ಬಹುರಾಷ್ಟ್ರೀಯ ಕಂಪನಿಗಳು ಬೇಡ”

ಇದು ನಮ್ಮ ಬಂಡವಾಳಿಗರ ಇತ್ತೀಚಿನ ಕೂಗು. ದೇಶೀ ಬಂಡವಾಳಿಗರ ಸಂಘಟನೆಯಾದ ಅಸ್ಸೋಚಾಮ್‌ನ ಅಧ್ಯಕ್ಷ ಸೋಮನಿ ಬಹುರಾಷ್ಟ್ರೀಯ ಕಂಪನಿಗಳಿ ದ್ದರು ದೇಶೀ ಬಂಡವಾಳಿಗರೇ ಲೇಸು. ಸ್ವದೇಶಿ ನಮಗೆ ಹಿತ ಎಂದಿದ್ದಾನೆ. ಎಂ.ಥಾಪರ್ ಎಂಬಾತನ ನೇತೃತ್ವದಡಿ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಈ ಥಾಪರ್ ಸಮಿತಿ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶವನ್ನು ತೆರೆದಿಡುವ ಕ್ರಮಗಳನ್ನು ಕೈಗೊಳ್ಳಬಾರದೆನ್ನುವಂತೆ ದೇಶೀ ಬಂಡವಾಳಿಗರಿಗೆ ರಕ್ಷಣೆ ನೀಡಬೇಕು ಎನ್ನುವಂತಹ ವರದಿ ನೀಡಿತ್ತು. ಈ ಸಮಿತಿಯ ಇಂತಹ ನಿಲುವನ್ನು ಬಹುರಾಷ್ಟ್ರೀಯ ಕಂಪನಿಗಳು ತೀವ್ರವಾಗಿ ಟೀಕಿಸಿದ್ದವು. ಆದ್ದರಿಂದಲೇ ಸೋಮನಿಯದ ನಿಲುವು

ಈತ ಸ್ಪಷ್ಟವಾಗೇ ಹೇಳಿರುವುದು “ನಾವೆಲ್ಲ ತೀರ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿದ್ದೆವು. ಇದು ತಪ್ಪು ಎಂಬ ಅರಿವುಂಟಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ಪರ/ವಿರುದ್ಧ ಎಂಬುದು ಮುಖ್ಯವಲ್ಲ. ಬದಲಿಗೆ ರಾಷ್ಟ್ರೀಯ ಹಿತಾಸಕ್ತಿ ಮುಖ್ಯ ...... ಭಾರತೀಯರು ಭಾರತದೊಳಕ್ಕೆ ವಿದೇಶಿ ಹಣ ತಂದು ಹೂಡುವಂತಹ ಯೋಜನೆಗಳನ್ನು ರೂಪಿಸಬಹುದು” ಎಂದು.

ಇದೇ ರೀತಿ ಫಿಕ್ಕಿಯ ಅಧ್ಯಕ್ಷ ಡಾ.ಅಮಿತ್ ಮಿತ್ರಾ ಬಹುರಾಷ್ಟ್ರೀಯ ಕಂಪನಿಗಳು ಶೇ 100 ರಷ್ಟು ಹೂಡಿಕೆಗಳು ಅಧೀನ ಕಂಪನಿಗಳನ್ನು ಭಾರತದಲ್ಲಿ ಪ್ರಾರಂಭಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಈತ ಇನ್ನೂ ಮುಂದುವರಿದು ಬಹುರಾಷ್ಟ್ರೀಯ ಕಂಪನಿಗಳ ಭಾರತದ ಸಹಯೋಗಿ ಕ್ಷೇತ್ರದಲ್ಲಿ ತಜ್ಞತೆ ಪಡೆದಿದ್ದರೆ ಆತನಿಗೆ ಮಾತ್ರ ಈ ಕ್ಷೇತ್ರದಲ್ಲಿ ಅವಕಾಶ ನೀಡಬೇಕು. ಭಾರತೀಯರಿಗೇ ನಾಯಕತ್ವದ ಪಾತ್ರವಿರಬೇಕು ಎಂದೂ ಹೇಳಿದ್ದಾರೆ.

ಈ ಹೇಳಿಕೆಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಟೀಕಿಸುವುದರೊಂದಿಗೆ ದೇಶೀ ಬಂಡವಾಳಿಗರುಮತ್ತುಬಹುರಾಷ್ಟ್ರೀಯಕಂಪನಿಗಳ ನಡುವಿನ ಕಂದರ ಇನ್ನೂ ಹೆಚ್ಚಾಗಿದೆ.

ಇದು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತದೆ. ಅದೇನೆಂದರೆ ದೇಶದ ಆಡಳಿತ ಹಿಡಿದಿರುವ ಬೂರ್ಜ್ವಾ - ಭೂಮಾಲಕ ವರ್ಗ ತನ್ನ ಹಿತಾಸಕ್ತಿಗಳನ್ನು ಮಾತ್ರ ಕಾಯ್ದುಕೊಳ್ಳುತ್ತದೆ ಎಂಬುದು. ಆ ವರ್ಗಕ್ಕೆ ಲಾಭವಾಗುವುದಾದರೆ ಅಷ್ಟರಮಟ್ಟಿಗೆ ಮಾತ್ರ ಉದಾರೀಕರಣ ಬೇಕು. ಬಹುರಾಷ್ಟ್ರೀಯ ಕಂಪನಿಗಳ ಹೂಡಿಕೆ/ತಂತ್ರಜ್ಞಾನ ಬೇಕು. ಆ ವರ್ಗಕ್ಕೆ ಹಾನಿಯಾಗುವುದಾದರೆ ಅದು ದೇಶದ ಹಿತಾಸಕ್ತಿಗೆ ವಿರುದ್ಧ. ಇದು ಅವರ ನ್ಯಾಯ. ದೇಶದ ದುಡಿವ ವರ್ಗಕ್ಕೆ, ರೈತ ವರ್ಗಕ್ಕೆ ಜನಸಾಮಾನ್ಯರಿಗೆ ಹಾನಿಯಾದರೆ ಈ ವರ್ಗಕ್ಕೆ ಕಾಳಜಿಯಿಲ್ಲ. ತನಗೆ ಹಾನಿಯಾದರೆ ಮಾತ್ರ ಸಹಿಸಲಾಗದು.

ಇಂತಹ ನಿಲುವು ಬಾಂಬೆ ಕ್ಲಬ್ಬಿನದು ಎಂದೂ ಬಹುರಾಷ್ಟ್ರೀಯ ಕಂಪನಿಗಳ ವಕ್ತಾರರು ಟೀಕಿಸಿದ್ದಾರೆ. ಯಾಕೆಂದರೆ ಅವರು ಹೇಳುವಂತೆ ಥಾಪರ್ ಸಹ ಈ ಬಾಂಬೆ ಕ್ಲಬ್ಬಿನ ಸದಸ್ಯರು. ಇಂತಹವರು ಇನ್ನೆಂತಹ ವರದಿ ನೀಡಲು ಸಾಧ್ಯ?

ದುಡಿವ ವರ್ಗಕ್ಕೆ ಇಂತಹ ವಾದಗಳು ಸ್ಪಷ್ಟವಾಗಿ ಅರ್ಥವಾಗುತ್ತವೆ ಅಲ್ಲವೇ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಕಾಮಧೇನುಗಳಿಗೆ ಕಾಯಕಲ್ಪ

ಇಷ್ಟೆಲ್ಲ ಉದಾರೀಕರಣದ ಗೌಜುಗದ್ದಲಗಳ ನಡುವೆಯೂ ಎಡಪಕ್ಷಗಳು ಐದು ಕಾಮಧೇನುಗಳಾದ ಸಾರ್ವಜನಿಕ ವಲಯದ ಘಟಕಗಳಿಗೆ ರಿಯಾಯಿತಿ ಪಡೆಯಲು ಸಫಲವಾಗಿದೆ. ರೋಗಗ್ರಸ್ತವಾಗಿರುವ ಈ ಐದು ಘಟಕಗಳನ್ನು ಎಡಪಕ್ಷಗಳ ಪ್ರಯತ್ನವಿಲ್ಲದಿದ್ದರೆ ಮುಚ್ಚಬೇಕಾಗಿತ್ತು. ಸರಕಾರ ಇವುಗಳ ಕೊಲೆ ಮಾಡುತ್ತಿತ್ತು. ಇಲ್ಲವಾದರೆ ಖಾಸಗಿಯವರಿಗೆ ಮೂರುಕಾಸಿಗೆ ಮಾರಿಬಿಡುತ್ತಿತ್ತು.

ಈ ಘಟಕಗಳೆಂದರೆ 1.ಹೆವಿ ಇಂಜಿನಿಯರಿಂಗ್ ಕಾರ್ಪೊರೇಷನ್ (ಹೆಚ್‌ಇಸಿ), 2. ಹಿಂದುಸ್ತಾನ್ ಫರ್ಟಿಲೈಸರ್ ಕಾರ್ಪೊರೇಷನ್ (ಹೆಚ್‌ಎಫ್‌ಸಿ), 3. ಸ್ಕೂಟರ್ ಇಂಡಿಯಾ ಲಿಮಿಟೆಡ್ (ಲಕ್ನೋ), 4.ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಫ್‌ಸಿಐ) ಮತ್ತು ಹಿಂದೂಸ್ತಾನ್ ಫೋಟೋ ಫಿಲ್ಮ್(ಹೆಚ್‌ಪಿಎಫ್)

ಈ ಪ್ರಯತ್ನದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಎರಡೂ ತೊಡಗಿದ್ದವು. ಮನಮೋಹನ ಸಿಂಗರ ಸಹಾನುಭೂತಿ ರಹಿತ ನೀತಿಗೆ ಬದಲಿಗೆ ಈ ಸಹಾನುಭೂತಿಯ ನಿಲುವನ್ನು ಸಂಯುಕ್ತ ರಂಗದ ಸರಕಾರ ತಳೆಯುವಂತೆ ಮಾಡುವಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸಫಲವಾಗಿವೆ. ಈ ವಿಷಯದಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರೂ ಸಹಾನುಭೂತಿ ತೋರಿದರು ಎನ್ನಲಾಗುತ್ತಿದೆ.

ಈ ಸುದ್ದಿ ಬರುತ್ತಿದ್ದಂತೆ ಉದಾರೀಕರಣವಾದಿಗಳು ಕಿಡಿಕಾರತೊಡಗಿದ್ದಾರೆ.ಸಂಯುಕ್ತ ರಂಗ ಸರಕಾರ ದೊಡ್ಡ ತಪ್ಪೆಸಗುತ್ತಿದೆ ಎನ್ನುವ ಟೀಕೆಯನ್ನು ಈ ವಕ್ತಾರರು ಮಾಡುತ್ತಿದ್ದಾರೆ.

ಬಹುತೇಕ ಸಾರ್ವಜನಿಕ ವಲಯದ ಉದ್ದಿಮೆಗಳ ಇಂದಿನ ಸ್ಥಿತಿಗೆ ಕಾಂಗ್ರೆಸ್ ನೇತೃತ್ವದ ಹಿಂದಿನ ಸರಕಾರಗಳದ್ದೇ ದೊಡ್ಡ ಹೊಣೆ. ಈ ಉದ್ದಿಮೆಗಳನ್ನು ತಮ್ಮ ಖಾಸಗಿ ಆಸ್ತಿಯಂತೆ ಈ ರಾಜಕಾರಣಿಗಳು ಬಳಸಿಕೊಂಡು ಅದನ್ನು ದಿವಾಳಿಯೆಬ್ಬಿಸಿದವು.ಈಗ ಇವು ಹಾನಿ ಮಾಡುತ್ತಿವೆ ಎಂಬ ನೆವದಲ್ಲಿ ಅದನ್ನು ಮೂರು ಕಾಸಿಗೆ ಮಾರಿ ಖಾಸಗಿಯವರಿಗೆ ಅಪಾರ ಲಾಭ ಮಾಡಿಕೊಡುವ ಹುನ್ನಾರ ಈ ರಾಜಕಾರಣಿಗಳದ್ದು.

ಈ ಮೇಲಿನ ಐದು ಘಟಕಗಳ ವಿಷಯದಲ್ಲಿಯೂ ಇದು ಆಗುವುದಿಲ್ಲ. ರೋಗ ನಿವಾರಿಸಿ ಪುನರುಜ್ಜೀವನಗೊಳಿಸಲು ಸರಕಾರ ನೆರವು ನೀಡಲು ಈಗ ಒಪ್ಪಿರುವುದರಿಂದ ಈ ಘಟಕಗಳಿಗೆ ಕಾಯಕಲ್ಪವಾಗುವ ಸಾಧ್ಯತೆಗಳು ಹೆಚ್ಚಿವೆ. ಎಡಪಕ್ಷಗಳಲ್ಲದೆ ಇನ್ನಾರು ಇಂತಹ ಹೋರಾಟ ಮಾಡಬಲ್ಲರು?

ಉದಾರೀಕರಣ ಅಲ್ಲಿ ನೋವಿನ ಮೂಟೆಗಳನ್ನೇ ತಂದಿದೆಯಂತೆ

ಉದಾರೀಕರಣ ಈ ಜಗತ್ತಿನಾದ್ಯಂತ ಬಂಡವಾಳಶಾಹಿಗಳ ಪ್ರೀತಿಯ ಶಬ್ದವೂ ಹೌದಲ್ಲವೇ? ಸಮಾಜವಾದಿ ಸೋವಿಯತ್ ದೇಶದ ವಿಘಟನೆಯ ನಂತರ ಉದಾರೀಕರಣ ಜಾಗತೀಕರಣಗಳು ಜಗತ್ತಿನ ಆರ್ಥಿಕ ಸಮಸ್ಯೆಗಳಿಗೆ ಉತ್ತರ ಎಂಬ ಭಾವನೆಯನ್ನು ಉಂಟು ಮಾಡಲಾಗುತ್ತಿದೆ. ಆದರೆ ಉದಾರೀಕರಣದ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದ ಜಗತ್ತಿನ ಇತರ ದೇಶಗಳಲ್ಲಿ ನಿಜವಾಗಿಯೂ ಸಮೃದ್ಧಿ ಆಗಿದೆಯೇ?

ಸಾಮ್ರಾಜ್ಯಶಾಹಿ ಅಮೆರಿಕದ ಬಾಗಿಲಲ್ಲೇ ಇರುವ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಹಾಗೆ ಉದಾರಿಕರಣ ಹಳೆಯ ಶಬ್ದ. ಆದರೆ ಈ ಉದಾರೀಕರಣದ ಪರಿಣಾಮ ಏನಾಗಿದೆ ನೋಡಿ. ‘ಪೆರುವಿನ ಗೆರಿಲ್ಲಾಗಳು ಈ ಹೊಸ ಉದಾರ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಈ ನೀತಿಗಳು ಮಾನವ ಹಕ್ಕುಗಳನ್ನೇ ಉಲ್ಲಂಘಿಸುತ್ತವೆ ಎನ್ನುತ್ತಾರೆ ಅವರು.

ಉದಾರೀಕರಣದ ಯಶಸ್ಸಿನ ಉತ್ತಮ ಉದಾಹರಣೆ ಎನ್ನಲಾಗುವ ಮೇಕ್ಸಿಕೊದ ಪರಿಸ್ಥಿತಿ ನೋಡಿ. ಅಲ್ಲಿನ ಶೇ 90 ಕ್ಕೂ ಹೆಚ್ಚು ಜನ ಕ್ರಾಂತಿಕಾರಿ ಗೆರಿಲ್ಲಾಗಳಿಗೆ ಬೆಂಬಲ ನೀಡುತ್ತಾರೆ. ಯಾಕೆಂದರೆ ಉದಾರೀಕರಣ ಈ ಜನರ ಬದುಕನ್ನು ಇಷ್ಟು ಹದಗೆಡಿಸಿಬಿಟ್ಟಿದೆ.

ಮಾರುಕಟ್ಟೆ ಆರ್ಥಿಕ ಉದಾರೀಕರಣ, ಖಾಸಗೀಕರಣಗಳ ಆರ್ಥಿಕ ನೀತಿಗಳು ಈ ದೇಶಗಳ ಬಡವರನ್ನು ತುಳಿದು ಕೇಕೆ ಹಾಕುತ್ತಿದೆ. ಬೆಲೆಗಳು ಗಗನಕ್ಕೇರಿ ಕುಳಿತಿವೆ. ನಿರುದ್ಯೋಗ ಹೆಚ್ಚಾಗಿದೆ. ಸಹಾಯಧನಗಳನ್ನು ಹಿಂತೆಗೆದುಕೊಂಡಿರುವುದರಿಂದ ಜನಸಾಮಾನ್ಯರಿಗೆ ಆರ್ಥಿಕ ಅಭದ್ರತೆ ತೀವ್ರವಾಗಿ ಕಾಡಿಸುತ್ತಿದೆ. ಲ್ಯಾಟಿನ್ ಅಮೆರಿಕದ ಎಲ್ಲ ದೇಶಗಳಲ್ಲಿ ನಲವತ್ತು ವರ್ಷಗಳ ಹಿಂದೆ ಎಷ್ಟು ಬಡತನವಿತ್ತೋ ಇವತ್ತು ಅದರ ಎರಡರಷ್ಟು ಬಡತನ ಹೆಚ್ಚಾಗಿದೆಯಂತೆ.

ವಿದೇಶಿ ಬಂಡವಾಳ ಹರಿದು ಬರುವುದರೊಡನೆ ಶೇರು ಮಾರುಕಟ್ಟೆಯಲ್ಲಿ ಅನಿಶ್ಚಿತತೆ ತಾಂಡವವಾಡುತ್ತಿದೆ. ಉಳ್ಳವರು ಆಸೆಬುರುಕರಾಗಿದ್ದಾರೆ. ಭ್ರಷ್ಟಾಚಾರ ಅಟ್ಟಹಾಸಗೈಯುತ್ತಿದೆ.

ಅದೇ ಉದಾರೀಕರಣದ ಆರ್ಥಿಕ ನೀತಿಗಳನ್ನು ಈಗ ಭಾರತ ಜಾರಿಗೆ ತಂದಿರುವುದು!

ಬಂಡವಾಳ ದೊರೆಗಳಿಗೆ ರಕ್ಷೆ ಜನಸಾಮಾನ್ಯರಿಗೆ ಶಿಕ್ಷೆ

ಕರ್ನಾಟಕದ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ನೀರಾವರಿ ಕರ ಹೇರುವ ಮತ್ತು ಬಸ್ಸು ಪ್ರಯಾಣ ದರ ಹೆಚ್ಚಿಸುವ ಮಾತನ್ನು ಆಗಲೇ ಆಡಿದ್ದಾರೆ. ರಾಜ್ಯದ ಹಣಕಾಸು ಪರಿಸ್ಥಿತಿ ತೀವ್ರ ಹದಗೆಟ್ಟಿದೆಯಾದ್ದರಿಂದ ಇಂತಹ ಪರಿಸ್ಥಿತಿ ಉದ್ಭವವಾಗಿದೆ ಎಂದು ಅವರ ಸಮರ್ಥನೆ. ಆಯವ್ಯಯ ಕೊರತೆ 450 ಕೋಟಿ ರೂಪಾಯಿಗಳಿಗೇರುವ ಲಕ್ಷಣಗಳಿರುವುದರಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮಾತನ್ನು ಅವರು ಆಡಿದ್ದಾರೆ.

ಅಧಿಕಾರಕ್ಕೆ ಬಂದಂದಿನಿಂದ ಆಡಳಿತದ ಕರೆಗೆ ಲಕ್ಷವನ್ನೇ ವಹಿಸದೆ ಜಿಲ್ಲೆಗಳನ್ನು ಹೆಚ್ಚಿಸುವ ಬೇಜವಾಬ್ದಾರಿ ಮಾತನಾಡಿದ ಪಟೇಲರ ಸರಕಾರ ಈಗ ಸಂಪನ್ಮೂಲಗಳ ಕೊರತೆ ಎಂದರೆ ಜನ ನಂಬಿಯಾರೆ? ಹೆಂಡ, ಗ್ರಾನೈಟ್‌ಗಳಂತಹ ಉದ್ದಿಮೆಗಳ ದೊರೆಗಳು ನಡೆಸುವ ಕಳ್ಳ ವ್ಯವಹಾರ ಹೊರಗೆಳೆದು ಅವರಿಗೆ ತೆರಿಗೆ ಹೇರಿದರೆ ಇತರ ಬಂಡವಾಳಿಗರ ವ್ಯವಹಾರವೆಲ್ಲ ನಂಬರ್ ಒನ್‌ನಲ್ಲೇ ನಡೆವಂತೆ ಮಾಡಿದರೆ ಸಂಪನ್ಮೂಲಗಳ ಕೊರತೆಯನ್ನು ಖಂಡಿತ ಕಡಿಮೆ ಮಾಡಬಹುದು. ಆದರೆ ಪಟೇಲರ ಸರಕಾರಕ್ಕೆ ಈ ದೊರೆಗಳನ್ನು ಮುಟ್ಟುವ ಧೈರ್ಯವಿಲ್ಲ. ಆದ್ದರಿಂದಲೇ ಜನಸಾಮಾನ್ಯರ ಹೆಗಲಿಗೆ ಸಂಪನ್ಮೂಲ ಕೊರತೆಯ ಹೊರೆಯನ್ನು ಹೊರಿಸ ಹೊರಟಿರುವುದು. ಕರ್ನಾಟಕದ ಜನಸಾಮಾನ್ಯರು ಪ್ರತಿಭಟಿಸದೆ ಇರಲು ಸಾಧ್ಯವೇ?

ರಫ್ತು ದೇಶದೊಳಗೆ

ದೇಶದೊಳಗೇ ಮಾರುವುದನ್ನು ರಫ್ತು ಎನ್ನುವುದಿಲ್ಲ ಆದರೆ ಈಗ ದೇಶದಲ್ಲಿ ಆಗುತ್ತಿರುವುದು ಅದೇ. ರಫ್ತಿಗಾಗಿ ಉತ್ಪಾದಿಸುವ ವಸ್ತುಗಳನ್ನು ದೇಶದೊಳಗೇ ಮಾರುತ್ತಿದ್ದಾರೆ ರಫ್ತುದಾರರು. ಕಾರಣ? ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ವ್ಯಾಪಾರ ಮಂದಿಯಾಗಿರುವುದು. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈ ಸರಕುಗಳಿಗೆ ಬೇಡಿಕೆಯೇ ಇಲ್ಲದಿದ್ದರೆ ಏನು ಮಾಡುವುದು? ರಫ್ತಿಗಾಗಿ ಉತ್ಪಾದಿಸಿ ಆಗಿದೆ. ಉತ್ಪಾದನೆಗೆ ಹಣ ಖರ್ಚಾಗಿದೆ. ಮುಂದೆ ಉತ್ಪಾದನೆಗೆ ಹಣವಿಲ್ಲ. ಈ ಸರಕು ಮಾರಿದರೆ ಅದರಿಂದ ಬರುವ ಹಣವನ್ನು ಉತ್ಪಾದನೆಗೆ ಬಳಸಬಹುದು. ಎಲ್ಲಿ ಮಾರಬೇಕು? ರಫ್ತು ಸಾಧ್ಯವಾಗದಿದ್ದರೆ ದೇಶದೊಳಗೇ ಮಾರಿಬಿಡಬಹುದು ಇದು ರಫ್ತುದಾರರ ತೀರ್ಮಾನ. ಇದರಿಂದ ಯಾರಿಗೆ ಹಾನಿ?

ರಫ್ತಿನಿಂದ ಬರುವ ವಿದೇಶೀ ವಿನಿಮಯ ದೇಶಕ್ಕೆ ಬರುವುದಿಲ್ಲ. ವಿದೇಶೀ ಸಾಲದ ಹೊರೆ ಹೊತ್ತಿರುವ ಹಲವು ಕ್ಷೇತ್ರಗಳಲ್ಲಿ ಪರಾವಲಂಬಿಯಾಗಿರುವ, ಆಮದು ಮಾಡಬೇಕಾಗಿರುವ ದೇಶಕ್ಕೆ ವಿದೇಶೀ ವಿನಿಮಯದ ತೀವ್ರ ಅವಶ್ಯಕತೆ ಇದೆ. ಆದರೆ ರಫ್ತಾಗಬೇಕಾದ್ದೂ ರಫ್ತಾಗದೇ ಉಳಿದರೆ? ಆ ವಿದೇಶೀ ವಿನಿಮಯವೂ ಇಲ್ಲ. ಇದರಿಂದ ಉಂಟಾಗುವ ಎಲ್ಲ ಆರ್ಥಿಕ ತೊಂದರೆಗಳೂ ದೇಶಕ್ಕೆ ಉಂಟಾಗುತ್ತದೆ.

ಯೋಜನೆಯೇ ಇಲ್ಲದ ಆರ್ಥಿಕದಲ್ಲಿ ಇದಾಗುವುದು ಸಹಜವಲ್ಲವೇ?

ಜಾತೀಯತೆ, ಗುಂಪುಗಾರಿಕೆಯಿಂದ ಜರ್ಝರಿತವಾದ ಬಿಜೆಪಿಯ ಹೊಸ ಅವಸ್ಥೆ

1997 ಬರುತ್ತಿದ್ದಂತೆಯೇ ಬಿಜೆಪಿ ಒಂದು ನೀತಿ ಬದ್ಧ ಜವಾಬ್ದಾರಿಯುತ ಪಕ್ಷವೆಂದು ಬಿಂಬಿಸುವ ಕನಸು

‘ದಿ ಹಿಂದೂ’ನಲ್ಲಿ ಕೇಶವ್‌ರವರ ವ್ಯಂಗ್ಯ



ದುಃಸ್ವಪ್ನವಾಗಿ ಪರಿಣಮಿಸಿದೆ. ರಾಜಸ್ತಾನದ ಬೆಳವಣಿಗೆಗಳು ಇದನ್ನು ಬಯಲು ಮಾಡಿವೆ. ಮೊದಲು ಗುಜರಾತಿನಲ್ಲಿ ಆ ಪಕ್ಷ ಮೇಲಿಂದ ಕೆಳಗೆ ಜಾತಿ ಆಧಾರದಲ್ಲಿ ಒಡೆಯಿತು. ನಂತರದಲ್ಲಿ, ಮಧ್ಯಪ್ರದೇಶಗಳಲ್ಲಿ ತೀವ್ರ ಗುಂಪುಗಾರಿಕೆ ಕಂಡುಬಂತು. ಈಗ ರಾಜಸ್ತಾನದಲ್ಲಿ ಸ್ಥಿತಿ ಉಲ್ಬಣಗೊಂಡಿದೆ. ಇವೆಲ್ಲದರ ಹಿಂದೆ ಇರುವ ಒಂದು ಸಮಾನ ಅಂಶವೆಂದರೆ ಬಿಜೆಪಿಯ ಸಾಮಾಜಿಕ ಇಂಜಿನಿಯರಿಂಗ್ ಪರಿಕಲ್ಪನೆಯ ವಿಫಲತೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ ಅಭಿಪ್ರಾಯ ಪಟ್ಟಿದೆ.

1993 ರಲ್ಲಿ ಉತ್ತರ ಪ್ರದೇಶದಲ್ಲಿ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರ ಕಳಕೊಂಡಾಗ ಅದರ ಈ ಸಾಮಾಜಿಕ ಇಂಜಿನಿಯರಿಂಗ್‌ನ ಪರಿಕಲ್ಪನೆ ಬಂತು. ಸಮಾಜವಾದಿ ಪಕ್ಷ ಬಿಎಸ್‌ಪಿ ಮೈತ್ರಿ ಒಡ್ಡಿದ ಸವಾಲನ್ನು ಎದುರಿಸುವ ಪ್ರಯತ್ನ ಅದಾಗಿತ್ತು. ಹಿಂದುಳಿದ ಜಾತಿಗಳು, ಕೋಮುಗಳನ್ನು ತನ್ನತ್ತ ಆಕರ್ಷಿಸಿ ಅವರನ್ನು ತಮ್ಮ ಮುಖಂಡರೆಂದು ತೋರಿಸಿಕೊಳ್ಳುವುದು ಈ ಪರಿಕಲ್ಪನೆಯ ಮುಖ್ಯ ಅಂಶ. ಒಂದು ಅರ್ಥದಲ್ಲಿ ಕೇವಲ ಹಿಂದುತ್ವದಿಂದಲೇ ಉತ್ತರ ಪ್ರದೇಶದಲ್ಲಾಗಲೀ, ಕೇಂದ್ರದಲ್ಲಾಗಲಿ ಅಧಿಕಾರ ಗಿಟ್ಟಿಸಲು ಸಾಧ್ಯವಿಲ್ಲ ಎಂಬುದನ್ನು ಅದು ಈ ಮೂಲಕ ಒಪ್ಪಿಕೊಂಡಂತಾಗಿತ್ತು. ಆದರೆ ಈಗ ಈ ಸಾಮಾಜಿಕ ಇಂಜಿನಿಯರಿಂಗ್ ಆ ಪಕ್ಷದಲ್ಲಿ ಗುಂಪುಗಾರಿಕೆಯೊಂದಿಗೆ ಜಾತಿಯ ವಿಭಜನೆಯನ್ನೂ ತಂದಂತೆ ಕಾಣುತ್ತದೆ.

ಸಾಮಾಜಿಕ ನ್ಯಾಯದ ವಿಚಾರ ಜನಜನಿತವಾಗುವುದನ್ನು ಕಂಡ ಬಿಜೆಪಿ ಸಾಮಾಜಿಕ ಸಾಮರಸ್ಯದ ವಿಚಾರವನ್ನು ಮುಂದಿಟ್ಟಿತು. ಈ ಎರಡರ ಮುಖ್ಯ ವ್ಯತ್ಯಾಸವೆಂದರೆ ಸಾಮಾಜಿಕ ನ್ಯಾಯ ವೆಂಬುದು ದಲಿತ, ಹಿಂದುಳಿದ ವಿಭಾಗಗಳನ್ನು ಅಧಿಕಾರ ಸಂಪನ್ನಗೊಳಿಸಬಯಸುವ ಅಂದೋಲನವಾದರೆ ಬಿಜೆಪಿಯ ಸಾಮಾಜಿಕ ಸಾಮರಸ್ಯ ಹಳೆಯ ಮೇಲ್ಜಾತಿ ಕೃಪಾಪೋಷಣೆಯ ವಿಚಾರವೇ ಆಗಿತ್ತು. ಸಾಮಾಜಿಕವಾಗಿ ತುಳಿತಕ್ಕೊಳಗಾದವರು ಮೇಲ್ಜಾತಿಗಳ ವಿಶಾಲ ಹೃದಯದ ಕೃಪೆಯಲ್ಲಿ ಬದುಕಬೇಕೆನ್ನುವ ವಿಚಾರ ಅದು.

ಆದ್ದರಿಂದ ಮೇಲೆ ಹೇಳಿದ ಸಾಮಾಜಿಕ ಇಂಜಿನಿಯರಿಂಗ್ ಮತ್ತು ಬಿಜೆಪಿಯ ಮೇಲ್ಜಾತಿ ಪರ ಸೈದ್ಧಾಂತಿಕ ನೆಲೆಯ ನಡುವೆ ತಿಕ್ಕಾಟ ಆರಂಭವಾಯಿತು. ಒಂದೆಡೆ ತನ್ನ ಕೋಮುವಾದಿ ಸ್ವರೂಪವನ್ನು ಮರೆಮಾಚಲು ಬಿಜೆಪಿ ಹಿಂದುಳಿದ ವಿಭಾಗಗಳ ಸ್ಥಳೀಯ ಮಟ್ಟದ ಮುಖಂಡರನ್ನು ಮುಂದೆ ಮಾಡಿತು. ಆದರೆ ಮೇಲ್ಜಾತಿ ಸಾಮಾಜಿಕ ನೆಲೆ ಹಾಗೂ ಸೈದ್ಧಾಂತಿಕ ನಿಲುವು ತದ್ವಿರುದ್ಧವಾಗಿತ್ತು. ಹೀಗೆ ಕೇವಲ ಅಧಿಕಾರಕ್ಕಾಗಿ ಹಪಹಪಿಸುವ ಎಲ್ಲಾ ಪಕ್ಷಗಳಲ್ಲಿರುವ ಗುಂಪುಗಾರಿಕೆಯೊಂದಿಗೆ ಈ ಜಾತಿ ತಿಕ್ಕಾಟ, ಜಾತಿ ವಿಭಜನೆಗಳೂ ಸೇರಿ ಬಿಜೆಪಿಯನ್ನು ಅಲುಗಾಡಿಸಿಬಿಟ್ಟಿವೆ. ರಾಜಸ್ತಾನದಲ್ಲಿ ಇದೇ ಕಾಣುತ್ತಿರುವುದು. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಗೆ ಬೆಂಬಲ ಕುರಿತಂತೆ ಕಲ್‌ರಾಜ್ ಸಿಂಗ್ ಮತ್ತು ಕಲ್ಯಾಣ್ ಮಿಶ್ರರ ನಡುವಿನ ತಿಕ್ಕಾಟಗಳಲ್ಲೂ ಇದೇ ಕಾಣುತ್ತಿದೆ.

ಒಟ್ಟಿನಲ್ಲಿ ಬಿಜೆಪಿ ಕೂಡಾ ನೀತಿಬದ್ಧ, ನಿಸ್ವಾರ್ಥ ಪಕ್ಷವಲ್ಲ, ಅಧಿಕಾರಕ್ಕಾಗಿ ಪರದಾಡುವ, ಅದಕ್ಕಾಗಿ ಕೋಮುವಿಷ ಹರಡಿ ಆಧುನಿಕ ಭಾರತದ ಅಡಿಗಲ್ಲನ್ನು ಬುಡಮೇಲು ಮಾಡಲೂ ಹೇಸದ ವ್ಯಕ್ತಿಗಳ ಪಕ್ಷ ಎಂದು ಬಯಲಾಗಿದೆ. □

ಐಕ್ಯರಂಗ

ಕರ್ನಾಟಕದ ಶ್ರಮಜೀವಿಗಳ ವಾರಪತ್ರಿಕೆ

ಜನವರಿ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
			1	2	3	4	5	6	7	8	9	10	11
12	13	14	15	16	17	18	19	20	21	22	23	24	25
26	27	28	29	30	31								

14-ಮಕರ ಸಂಕ್ರಾಂತಿ 23-ನೇತಾಜಿ ಶತಾಬ್ದಿ

ಫೆಬ್ರವರಿ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
						1	2	3	4	5	6	7	8
9	10	11	12	13	14	15	16	17	18	19	20	21	22
23	24	25	26	27	28								

10 - ರಂಜಾನ್

ಮಾರ್ಚ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
						1	2	3	4	5	6	7	8
9	10	11	12	13	14	15	16	17	18	19	20	21	22
23	24	25	26	27	28	29	30	31					

7-ಶಿವರಾತ್ರಿ 28-ಗುಡ್‌ಫ್ರೈಡೇ

ಏಪ್ರಿಲ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
		1	2	3	4	5	6	7	8	9	10	11	12
13	14	15	16	17	18	19	20	21	22	23	24	25	26
27	28	29	30										

8-ಯುಗಾದಿ 14-ಅಂಬೇಡ್ಕರ್ ಜಯಂತಿ 18-ಬಕ್ರೀದ್ 20-ಮಹಾವೀರ ಜಯಂತಿ

ಮೇ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
				1	2	3	4	5	6	7	8	9	10
11	12	13	14	15	16	17	18	19	20	21	22	23	24
25	26	27	28	29	30	31							

1-ಮೇದಿನ 9-ಬಸವ ಜಯಂತಿ 18-ಮೊಹರಂ

ಜೂನ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30												

ಜುಲೈ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
		1	2	3	4	5	6	7	8	9	10	11	12
13	14	15	16	17	18	19	20	21	22	23	24	25	26
27	28	29	30	31									

18-ಈದ್ ಮಿಲಾದ್

ಆಗಸ್ಟ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
					1	2	3	4	5	6	7	8	9
10	11	12	13	14	15	16	17	18	19	20	21	22	23
24	25	26	27	28	29	30	31						

15-ಸ್ವಾತಂತ್ರ್ಯ ದಿನಾಚರಣೆ

ಸೆಪ್ಟೆಂಬರ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
	1	2	3	4	5	6	7	8	9	10	11	12	13
14	15	16	17	18	19	20	21	22	23	24	25	26	27
28	29	30											

5-ಗಣೇಶ ಚತುರ್ಥಿ

ಅಕ್ಟೋಬರ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
			1	2	3	4	5	6	7	8	9	10	11
12	13	14	15	16	17	18	19	20	21	22	23	24	25
26	27	28	29	30	31								

1-ಮಹಾಲಯ ಅಮಾವಾಸ್ಯೆ 2-ಗಾಂಧಿ ಜಯಂತಿ 10-ಆಯುಧಪೂಜೆ 11-ವಿಜಯದಶಮಿ 30-ನರಕಚತುರ್ದಶಿ

ನವಂಬರ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
						1	2	3	4	5	6	7	8
9	10	11	12	13	14	15	16	17	18	19	20	21	22
23	24	25	26	27	28	29	30						

1-ರಾಜ್ಯೋತ್ಸವ, ದೀಪಾವಳಿ

ಡಿಸೆಂಬರ್ 1997

ಭಾ	ಸೋ	ಮಂ	ಬು	ಗು	ಶು	ಶ	ಭಾ	ಸೋ	ಮಂ	ಬು	ಗು	ಶು	ಶ
	1	2	3	4	5	6	7	8	9	10	11	12	13
14	15	16	17	18	19	20	21	22	23	24	25	26	27
28	29	30	31										

25-ಕ್ರಿಸ್‌ಮಸ್

ವಿದೇಶೀ ದಾಸ್ಯದಿಂದ ವಿಮೋಚನೆಗಾಗಿ ಒಂದು ಶತಮಾನ ಕಾಲ ನಡೆದ ಸ್ವಾತಂತ್ರ್ಯ ಆಂದೋಲನ ಎರಡನೇ ಮಹಾಯುದ್ಧ ನಂತರ ತಾರಕಕ್ಕೇರಿತು. ಕಾರ್ಮಿಕರ, ರೈತರ ಹೋರಾಟಗಳು, ಅವು ಪಡೆದ ರಾಜಕೀಯ ಸ್ವರೂಪ, ಬಂಗಾಳದಲ್ಲಿ ತೇಭಾಗ ಚಳುವಳಿ, ಕೇರಳದಲ್ಲಿ ಪುನ್ನಪ್ರ-ವಯಲಾರ್ ಹೋರಾಟ ಇವೆಲ್ಲಕ್ಕೆ ಮುಕುಟವಿಟ್ಟಂತೆ ತೆಲಂಗಾಣ ಸಶಸ್ತ್ರ ಹೋರಾಟ, ಮುಂಬೈ ಮತ್ತಿತರ ಬಂದರುಗಳಲ್ಲಿ ರಿನ್ ನಾವಿಕರ ಬಂಡಾಯ, ಅದಕ್ಕೆ ಕಾರ್ಮಿಕರ, ಜನತೆಯ ಬೆಂಬಲ, ನೇತಾಜಿಯವರ ನೇತೃತ್ವದ ಆಜಾದ್ ಹಿಂದ್ ಸೇನೆಯ ಸಾಹಸಗಳು, ಅವರ ವಿರುದ್ಧ ಬ್ರಿಟಿಷರು ನಡೆಸಿದ ದೇಶದ್ರೋಹದ ಮೊಕದ್ದಮೆಗೆ ದೇಶಾದ್ಯಂತ ವ್ಯಕ್ತಗೊಂಡ ತೀವ್ರ, ಸಾಮ್ರಾಜ್ಯಶಾಹಿ ವಿರೋಧಿ ಪ್ರತಿಭಟನೆಗಳು ಬ್ರಿಟಿಷ್ ವಸಾಹತುಶಾಹಿಗಳನ್ನು ನಡುಗಿಸಿ ಬಿಟ್ಟವು. ಇತ್ತ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಖಂಡರು ಇದೊಂದು ರಾಷ್ಟ್ರೀಯ ಬಂಡಾಯವಾಗಿ ಪರಿಣಮಿಸಬಹುದು ಎಂದು ಭಯಪಟ್ಟರು. ಭಾರತದೇಶ ಆಗಸ್ಟ್ ೧೫, ೧೯೪೭ ರಂದು ಬ್ರಿಟಿಷ್ ವಸಾಹತುಶಾಹಿಗಳಿಂದ ರಾಜಕೀಯ ಸ್ವಾತಂತ್ರ್ಯ ಪಡೆಯಿತು.









50 ವರ್ಷಗಳಾದರೂ ಜನಸಾಮಾನ್ಯರ ಶೋಷಣೆ ತಪ್ಪಬೇಕಾದರೆ ರಾಜಕೀಯ ಸ್ವಾತಂತ್ರ್ಯದಲ್ಲಿ ಕೋಟ್ಯಾಂತರ ಹಸಿದ ಜನಗಳಿಗೆ ಆರ್ಥಿಕ ಸ್ವಾತಂತ್ರ್ಯದ ಅಂಶವೂ ಸೇರಿರಬೇಕು ಎಂಬ ಸ್ವಾತಂತ್ರ್ಯಆಂದೋಲನದಲ್ಲಿ ರೂಪುಗೊಂಡ ಆಶಯ ಈಡೇರಿಲ್ಲ. ಈಗಿನ ಬಂಡವಾಳಶಾಹಿ ಭೂಮಾಲಕ ವರ್ಗಗಳ ಪ್ರಭುತ್ವದ ಸ್ಥಾನದಲ್ಲಿ ದುಡಿಯುವ ವರ್ಗದ ನೇತೃತ್ವದ ಜನತಾ ಪ್ರಜಾಪ್ರಭುತ್ವ ಏರ್ಪಡುವವರೆಗೆ ಇದು ಸಂಭವವೂ ಇಲ್ಲ. ಅಪೂರ್ಣವಾಗಿ ಉಳಿದಿರುವ ಸ್ವಾತಂತ್ರ್ಯ ಆಂದೋಲನದ ಕನಸುಗಳನ್ನು ಮೂಲಭೂತ ಪ್ರಜಾಪ್ರಭುತ್ವ ಕರ್ತವ್ಯಗಳನ್ನು ಈಡೇರಿಸಲು ಆ ಜನತಾ ಪ್ರಜಾಪ್ರಭುತ್ವದತ್ತ ಮುನ್ನಡೆಯೋಣ.

ಯುಗೋಸ್ಲಾವಿಯಾದಲ್ಲಿ ಪ್ರತಿಕ್ರಾಂತಿಯ ತಯಾರಿ?

ಲೋಕಸಂಚಾರ



ಶರತ್‌ಚಂದ್ರ

ಯುಗೋಸ್ಲಾವಿಯವನ್ನು ಸಾಮ್ರಾಜ್ಯಶಾಹಿಗಳು ಹರಿಹಂಚಿದ ಮೇಲೂ ಅದರ ಕೊನೆಯ ಉಳಿದಿರುವ ಸರ್ಬಿಯಾ ಮತ್ತು ಮೊಂಟೆಗಾರೊ ಗಣರಾಜ್ಯವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲಾಗದ ಕೊನೆಯ ಪ್ರಯತ್ನಗಳನ್ನು ಮಾಡುತ್ತಿದೆ. ಇದೇ ದಿನವೂ ಸರ್ಬಿಯಾದ ಅಧ್ಯಕ್ಷ ಮಿಲೋಸೆವಿಕ್ ವಿರುದ್ಧ ನಡೆಯುತ್ತಿರುವ ಪ್ರತಿಭಟನಾ ಪ್ರದರ್ಶನಗಳು. ಇದಕ್ಕೆ ಕೊಡುವ ನೆವ, ಮುನಿಸಿಪಲ್ ಚುನಾವಣೆಗಳ ಫಲಿತಾಂಶವನ್ನು ಸರಕಾರ ರದ್ದುಗೊಳಿಸಿದೆ, ಇದರ ವಿರುದ್ಧ ಪ್ರತಿಭಟನೆ ಎಂದು. ಆದರೆ ಈ ನಿರಂತರ ಪ್ರದರ್ಶನಗಳ ಹಿಂದೆ ದೊಡ್ಡ ಪಿತೂರಿ ಇದೆ. ಈ ಪ್ರದರ್ಶನಗಳು 'ಪ್ರಜಾಪ್ರಭುತ್ವ ಕ್ರಾಂತಿ' ಎಂದೆಲ್ಲಾ ಹಾಡಿ ಹೊಗಳುತ್ತಿರುವ ಸಾಮ್ರಾಜ್ಯಶಾಹಿ ಮಾಧ್ಯಮಗಳು ಸಹ ದೇಶದ ಅತಿದೊಡ್ಡ ವಿಭಾಗವಾದ ಕಾರ್ಮಿಕ ವರ್ಗ ಈ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿಲ್ಲ ಎಂದು ಒಪ್ಪಿಕೊಂಡಿವೆ. ಕಾರ್ಮಿಕವರ್ಗ ಅಧ್ಯಕ್ಷ ಮಿಲೊಸೆವಿಕ್ ಸರಕಾರ ಪರ ಪ್ರದರ್ಶನ ನಡೆಸಿತು ಎಂದೂ ಒಪ್ಪಿಕೊಂಡಿದೆ. ಆದರೂ 'ಪ್ರಜಾಪ್ರಭುತ್ವ ಕ್ರಾಂತಿ'ಯ ಬೊಗಳೆ ಮುಂದುವರಿಸುತ್ತಿದೆ. ಈ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿರುವುದು ಮಧ್ಯಮ ವರ್ಗದ ಹಾಗೂ ಲಾಯರು ಮುಂತಾದ ವೃತ್ತಿಪರರು ಮಾತ್ರ ಎಂದೂ ಒಪ್ಪಿಕೊಂಡಿದೆ.

ಈ ಪ್ರತಿಭಟನೆ ಅಧ್ಯಕ್ಷ ಮಿಲೊಸೆವಿಕ್ ವಿರುದ್ಧ ತಿರುಗಿದೆಯಾದರೂ, ಅದರ ನಿಜವಾದ ಕಾರಣ ಯುಗೋಸ್ಲಾವಿಯಾ ಎದುರಿಸುತ್ತಿರುವ ತೀವ್ರ ಆರ್ಥಿಕ ಬಿಕ್ಕಟ್ಟು. ಸಾಮ್ರಾಜ್ಯಶಾಹಿಯೇ ಜನಾಂಗೀಯ ಕಲಹದ ನೆವದಲ್ಲಿ ಯುಗೋಸ್ಲಾವಿಯಾದ ಮೇಲೆ ಹೊರಿಸಿರುವ ಆರ್ಥಿಕ ದಿಗ್ಬಂಧನ, ಸರ್ಬಿಯಾದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಈ ದಿಗ್ಬಂಧನದಿಂದ ತೀವ್ರ ಸಮಸ್ಯೆ ಎದುರಿಸುತ್ತಿವೆ. ಆದರೆ ಸರ್ಬಿಯಾದ ಸರಕಾರ, ಈ ಆರ್ಥಿಕ ಬಿಕ್ಕಟ್ಟಿನಲ್ಲೂ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆಗಳನ್ನು ಖಾಸಗೀಕರಿಸುವ, ದೈತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸುವ ನೀತಿಯನ್ನು ವಿರೋಧಿಸಿದೆ. ಇದರಿಂದಾಗಿ ಕಾರ್ಮಿಕ ವರ್ಗ ಸರಕಾರದ ಬೆಂಬಲಕ್ಕಿದೆ. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಉಚಿತ ವೈದ್ಯಕೀಯ ನೆರವನ್ನು ಈ ಬಿಕ್ಕಟ್ಟಿನ ಸಮಯದಲ್ಲೂ ಮುಂದುವರಿಸಿಕೊಂಡು ಹೋಗುತ್ತಿದೆ. ಪೆನ್‌ಶನ್‌ಗಳನ್ನೂ ಕಾಲಕ್ಕೆ ಸರಿಯಾಗಿ ಕೊಡುತ್ತಾ ಬಂದಿದೆ. ಇದಲ್ಲದೆ ಬೋಸ್ನಿಯಾದಿಂದ ಜನಾಂಗೀಯ ಕಲಹದಿಂದ ಸರ್ಬಿಯಾಕ್ಕೆ ವಲಸೆ ಬಂದಿರುವ 10 ಲಕ್ಷಕ್ಕೂ ಹೆಚ್ಚು ಸರ್ಬಿಯನ್ ನಿರಾಶ್ರಿತರ ಭಾರವನ್ನು ಸಹ ಸರಕಾರ ಹೊರುತ್ತಿದೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಉತ್ಪಾದನಾ ಸಾಧನಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಮುಂದುವರಿಸಿಕೊಂಡು ಹೋಗುತ್ತಿರುವ ಏಕಮಾತ್ರ ದೇಶ ಯುಗೋಸ್ಲಾವಿಯ. ಅದಕ್ಕಾಗಿ ಸಾಮ್ರಾಜ್ಯಶಾಹಿಗಳು ಅದರ ವಿರುದ್ಧ ಕತ್ತಿ ಮಸೆಯುತ್ತಿರುವುದು.

'ಪ್ರಜಾಪ್ರಭುತ್ವ' 'ಮಾನವ ಹಕ್ಕು'ಗಳು ಇತ್ಯಾದಿ ಕಣ್ಣೊರೆಸುವ ತಂತ್ರಗಳಷ್ಟೆ.

ಕ್ಲಿಂಟನ್ ಒಂದು ವರ್ಷದ ಹಿಂದೆ ಡೇಟನ್ ಒಪ್ಪಂದಕ್ಕೆ ಸಹಿ ಹಾಕಿದರೆ (ಬೋಸ್ನಿಯಾದ ಸರ್ಬಿಯನ್ ಗೆರಿಲ್ಲಾಗಳ ಜತೆ ಸಂಬಂಧ ಕಡಿದುಕೊಂಡರೆ) ಆರ್ಥಿಕ ದಿಗ್ಬಂದನ ತೆಗೆದು ಹಾಕುವುದಾಗಿ ಕೊಟ್ಟ ಮಾತನ್ನು ಮುರಿದಿದ್ದಾರೆ. ಅಮೆರಿಕದ ಹಿತಾಸಕ್ತಿಗಳು ಇನ್ನೂ ತೊಂದರೆಯಲ್ಲಿರುವುದರಿಂದ ಈ ದಿಗ್ಬಂಧನ ಮುಂದುವರಿಯಬೇಕೆಂದು ಹೇಳಿದೆ. ಇದರಿಂದ ವಿದೇಶಿವಾಣಿಜ್ಯ, ಬಂಡವಾಳಹೂಡಿಕೆ, ಸಾಲ ಇವುಗಳಿಗೆ ತೀವ್ರ ತೊಂದರೆಯಾಗಿದೆ. ಇವೆಲ್ಲಾ ಒತ್ತಡ ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಿಸಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಲು. ಇದೇ ಅಲ್ಲವೇ ಅಮೆರಿಕನ್ ಹಿತಾಸಕ್ತಿ?

ಈಗ ಪ್ರತಿಭಟನಾ ಪ್ರದರ್ಶಗಳನ್ನು ಸಂಘಟಿಸುತ್ತಿರುವ 'ಡೆಮೊಕ್ರಾಟಿಕ್ ಪಕ್ಷ'ಕ್ಕೆ ಜರ್ಮನ್ ಬಂಡವಾಳಶಾಹಿಗಳು ಭಾರಿ ಹಣ ಸುರಿಯುತ್ತಿದ್ದಾರೆ. ಅದನ್ನು ತಮ್ಮ ನಿಯಂತ್ರಣದಲ್ಲಿ ಬಳಸುತ್ತಿದ್ದಾರೆ ಎಂದು 'ವಾಶಿಂಗ್‌ಟನ್ ಪೋಸ್ಟ್' ವರದಿ ಮಾಡಿದೆ. ಈ ಪಕ್ಷದ ಪತ್ರಿಕೆ ಬ್ಲಿಟ್ಜ್ 2-3 ತಿಂಗಳಲ್ಲಿ 2 ಲಕ್ಷ ಪ್ರತಿ ಮಾರಾಟವಾಗುತ್ತಿದೆ. ಅಲ್ಲದೆ ಭಾರಿ ಜಾಹೀರಾತು ಬಲದಿಂದ ಅತಿ ಅಗ್ಗದ ಬೆಲೆಯ ಪತ್ರಿಕೆಯೂ ಆಗಿದೆ. ಇದರ ಹಿಂದೆಯೂ ಜರ್ಮನ್ ಬಂಡವಾಳಶಾಹಿ ಕಂಪನಿಗಳು ಇವೆ ಎಂದಿದೆ ವಾಶಿಂಗ್‌ಟನ್ ಪೋಸ್ಟ್.

1991 ರಲ್ಲಿ ಯುಗೋಸ್ಲಾವಿಯಾವನ್ನು ಛಿದ್ರಗೊಳಿಸಿದ ಜನಾಂಗೀಯ ಕಲಹಗಳನ್ನು ಹುಟ್ಟುಹಾಕಿದ್ದು ಜರ್ಮನ್ ಗುತ್ತೇದಾರಿ ಬಂಡವಾಳಶಾಹಿಯೇ. ಆದರೆ ಇದರ ವಿರುದ್ಧ ಕಾರ್ಮಿಕ ವರ್ಗದ ವರ್ಗ ಪ್ರಜ್ಞೆಯ ಆಧಾರದ ಮೇಲೆ ಹೋರಾಡುವ ಬದಲು ಮಿಲೊಸೆವಿಕ್ ಸರ್ಬಿಯನ್ ರಾಷ್ಟ್ರೀಯವಾದದ ಮೇಲೆ ಹೋರಾಡಲು ಪ್ರಯತ್ನಿಸಿದರು. ಈ ತಪ್ಪಿನ ಲಾಭವನ್ನು ಜರ್ಮನ್ ಗುತ್ತೇದಾರಿ ಬಂಡವಾಳಶಾಹಿ ಪಡೆದಿದೆ. ಆದರೂ ಸಮಾಜವಾದ ಅಡಿಪಾಯವಾದ ಸಾರ್ವಜನಿಕ ಒಡೆತನದಲ್ಲಿ ಉತ್ಪಾದನಾ ಸಾಧನಗಳ ನೀತಿಯನ್ನು ಕಾಪಾಡಿಕೊಳ್ಳುವುದಕ್ಕೆ ಸರ್ಬಿಯನ್ ಕಾರ್ಮಿಕರು ಭಾರಿ ಬೆಂಬಲ ನೀಡಿದ್ದಾರೆ. ಪೂರ್ವ ಯುರೋಪಿನ ಇತರ ದೇಶಗಳ ಅನುಭವದಿಂದ, ಅವರಿಗೆ ಬಂಡವಾಳ ಶಾಹಿ ಪುನಃಸ್ಥಾಪನೆಯ ಪರಿಣಾಮ ಏನು ಎಂದು ಚೆನ್ನಾಗಿ ಅರಿವಾಗಿದೆ.

ಹೆಬ್ರೋನ್ ಒಪ್ಪಂದ: ಪ್ಯಾಲೆಸ್ಟೇನ್ - ಇಸ್ರೇಲಿ ಶಾಂತಿಯತ್ತ ಇನ್ನೊಂದು ಆಮೆಗತಿಯ ಹೆಜ್ಜೆ

1995 ರಲ್ಲಿ ಸಹಿ ಹಾಕಿರುವ ಒಪ್ಪಂದದ ಪ್ರಕಾರ ಯಾವಾಗಲೋ ಆಗಬೇಕಿದ್ದು, ಈಗ ಇನ್ನೊಂದು ಒಪ್ಪಂದದ ಮೂಲಕ ಪೂರ್ಣವಾಗಲ್ಲದಿದ್ದರೂ ಆಂಶಿಕವಾಗಿ ಜಾರಿಗೆ ಬರುವ ಸಾಧ್ಯತೆ ಇದೆ. ಹೆಬ್ರೋನ್ ಎಂಬ ಪ್ಯಾಲೆಸ್ಟೇನಿ ಪಟ್ಟಣದಿಂದ ಇಸ್ರೇಲಿ ಸೈನ್ಯ ವಾಪಸಾಗುವುದೇ ಈ ಒಪ್ಪಂದ. ಆದರೆ ಈ ಒಪ್ಪಂದ ಜಾರಿಗೆ ಬಂದ ರೀತಿ, ಇಸ್ರೇಲಿನ ಯಥಾ ವತ್ತಾದ ಹಠಮಾರಿತನ, ಅದಕ್ಕೆ ಅಮೆರಿಕದ ಕುಮ್ಮಕ್ಕು ಎಲ್ಲಾ ಗಮನಿಸಿದರೆ - ಶಾಂತಿ ಯನ್ನು ಮುಂದುವರೆಸುವುದಕ್ಕಿಂತ ಇನ್ನಷ್ಟು ಘರ್ಷಣೆ, ಹಿಂಸಾಚಾರಕ್ಕೆ ಎಡೆಮಾಡಿ ಕೊಡುವ ಸಾಧ್ಯತೆ ಇದೆ.

ಮೊದಲನೆಯದಾಗಿ ಹೆಬ್ರೋನ್‌ನಲ್ಲಿ ಶೇಕಡಾ 20 ರಷ್ಟು ಸೈನ್ಯ ಉಳಿಸಿಕೊಳ್ಳಲು ಒಪ್ಪಂದ ಅನುಮತಿ ನೀಡುತ್ತದೆ. ಹೆಬ್ರೋನ್‌ನಲ್ಲಿ ಬಲವಂತವಾಗಿ ಬಂದು ನೆಲೆ ಹೂಡಿರುವ ಇಸ್ರೇಲಿಗಳ ರಕ್ಷಣೆಗೆ ಅವರು ಇರಬಹುದು ಎಂದು ಒಪ್ಪಂದ ಹೇಳುತ್ತದೆ. ಅಲ್ಲದೆ ವಿವಾದದ ಪ್ರಕಾರ ಹೆಬ್ರೋನ್ ಮಸೀದಿ-ಯೆಹೂದಿ ಪೂಜಾ ಸ್ಥಳ ಇಸ್ರೇಲಿ ನಿಯಂತ್ರಣದಲ್ಲಿರುತ್ತದೆ.

ಈ ಒಪ್ಪಂದದಿಂದ ಯಾವುದೇ ಉದ್ದೇಶ ಸಾಧಿಸಿದಂತಾಗುವುದಿಲ್ಲ ಎಂದು ಎರಡೂ ಕಡೆಯ ಹಲವರು ತಿರಸ್ಕರಿಸಿದ್ದಾರೆ. ಆದ್ದರಿಂದ ಘರ್ಷಣೆ ಹಾಗೂ ಹಿಂಸಾಚಾರ ಹಾಗೇ ಮುಂದುವರಿಯುವ ಸಾಧ್ಯತೆ ಇದೆ. ಅಲ್ಲದೆ ಒಪ್ಪಂದದಲ್ಲಿ ಇದು ಹುಳುಕುಗಳನ್ನು ಬಳಸಿ, ಉಳಿದಿರುವ ಯೆಹೂದಿ ವಲಸೆಗಾರರ ರಕ್ಷಣೆಯ ಹೆಸರಲ್ಲಿ ಹೆಬ್ರೋನ್ ನಲ್ಲಿ ಮಿಲಿಟರಿ ಮಧ್ಯಪ್ರವೇಶ ಮಾಡುತ್ತಿದ್ದಾರೆ. ಇಡೀ ಒಪ್ಪಂದ ಅರ್ಥಹೀನವಾದುದು.

ಎಲ್ಲಾ ಪ್ಯಾಲೆಸ್ಟೇನ್ ಪ್ರದೇಶಗಳಲ್ಲಿ ಇಸ್ರೇಲಿ ಪಡೆಗಳು ಹಿಂದಿರುಗುವ ಬಗೆಗೆ ಆದ ಒಪ್ಪಂದದಲ್ಲಿ ಜಾರಿಗೆ ತರುವ ಅವಧಿಯನ್ನು 1998 ಕೊನೆವರೆಗೆ ವಿಸ್ತರಿಸಲಾಗಿದೆ. ಇಸ್ರೇಲಿ ಮತ್ತು ಪ್ಯಾಲೆಸ್ಟೇನ್ ನಡುವಣ ಆಖೈರು ಗಡಿ ನಿರ್ಧಾರ 1999 ರ ವರೆಗೆ ಮುಂದೆ ಹೋಗಿದೆ. ಅಲ್ಲದೆ ಈ ಬಗ್ಗೆ ಅಮೆರಿಕ ಕೊಟ್ಟ ಗ್ಯಾರಂಟಿಗೆ ಏನೂ ಅರ್ಥ ಇಲ್ಲ. ಯಾಕೆಂದರೆ ಇಸ್ರೇಲಿ ಪ್ರಧಾನಿ ನೆತನ್ಯಾಹು ಅದಕ್ಕೆ ಸಹಿ ಹಾಕಿಲ್ಲ.

ರಶ್ಯನ್ ಕಾರ್ಮಿಕ ವರ್ಗದ ಸಂಘಟನಾ ಮುನ್ನಡೆ

ರಶ್ಯದ ಪರಿಸ್ಥಿತಿ ಗಂಭೀರವಾಗುತ್ತಾ ನಡೆಯುವುದರ ಹಿನ್ನೆಲೆಯಲ್ಲಿ, ರಶ್ಯನ್ ಕಾರ್ಮಿಕ ವರ್ಗದ ಏಕಮಾತ್ರ ರಾಷ್ಟ್ರೀಯ ಟ್ರೇಡ್ ಯೂನಿಯನ್ ತನ್ನ ಮೂರನೇ ಮಹಾಧಿವೇಶನ ನಡೆಸಿತು. ಮಾಸ್ಕೋದಲ್ಲಿ ಡಿಸೆಂಬರ್ 5 ರಿಂದ 7 ರವರೆಗೆ ನಡೆದ ಈ ಮಹಾಧಿವೇಶನದಲ್ಲಿ 641 ಪ್ರತಿನಿಧಿಗಳು ಭಾಗವಹಿಸಿದ್ದರು. ಸುಮಾರು ನಾಲ್ಕುವರೆ ಕೋಟಿ ಕಾರ್ಮಿಕರು ಹಾಗೂ ಮೂರುವರೆ ಲಕ್ಷ ಘಟಕ ಯೂನಿಯನ್‌ಗಳ ಸದಸ್ಯತ್ವ ಹೊಂದಿರುವ ರಶ್ಯದ ಸ್ವತಂತ್ರ್ಯ ಯೂನಿಯನ್‌ಗಳ ಫೆಡರೇಷನ್ (FNPR) ರಶ್ಯನ್ ಕಾರ್ಮಿಕರ ಹಿತಾಸಕ್ತಿ ಕಾಪಾಡಲು ಅನುಸರಿಸಬೇಕಾದ ಕಾರ್ಯ ನೀತಿ ಹಾಗೂ ಕಾರ್ಯತಂತ್ರಗಳ ಬಗ್ಗೆ ಗಂಭೀರ ಚರ್ಚೆ ನಡೆಸಿತು.

ಬಳಕೆ ವಸ್ತುಗಳು, ತೈಲ, ಗ್ಯಾಸ್, ಗಣಿವರೆಗೆ ಎಲ್ಲಾ ರೀತಿಯ ಉತ್ಪಾದನಾ ಚಟುವಟಿಕೆ ಸ್ಥಗಿತಗೊಂಡಿದೆ. ಆದಿಯ ಬಂಡವಾಳಶಾಹಿಯ ಯುಗಕ್ಕೆ ರಶ್ಯ ತಳ್ಳಲ್ಪಡುತ್ತಿರುವ ಪರಿಣಾಮವಾಗಿ, ಸೋವಿಯತ್ ಹಾಗೂ ಇತರ ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ನಡುವೆ ಇದ್ದ ಸು ಸಂಘಟಿತ ಕೈಗಾರಿಕಾ ವ್ಯವಸ್ಥೆ ಕುಸಿದು ಬಿದ್ದಿದೆ. ಈ ಬಿಕ್ಕಟ್ಟಿನ ಎಲ್ಲಾ ಪರಿಣಾಮ ಗಳನ್ನು ಕಾರ್ಮಿಕ ವರ್ಗದ ಮೇಲೆ ಹೇರಲಾಗುತ್ತಿದೆ. ಗಣಿ ಕಾರ್ಮಿಕರಿಗೆ ಕಳೆದ 7 ತಿಂಗಳುಗಳಿಂದ ವೇತನ ಕೊಡಲಾಗಿಲ್ಲ. ಇನ್ನೂ ಎಷ್ಟೋ ಕ್ಷೇತ್ರಗಳಲ್ಲಿ ಇದೇ ರೀತಿ ವೇತನ ಕೊಡಲಾಗಿಲ್ಲ. ರಶ್ಯದಲ್ಲಿ ಒಟ್ಟಾರೆ ಯಾಗಿ ಬಾಕಿಯಾದ ಒಟ್ಟು ವೇತನ ಬಾಕಿ 40 ಸಾವಿರ ಶತಕೋಟಿ ರೂಬಲ್‌ಗಳು. ಅಧಿಕೃತ ಕನಿಷ್ಟ ಕೂಲಿ, ಕನಿಷ್ಟ ಜೀವನಾವಶ್ಯಕ ಕೂಲಿಯ ಶೇಕಡಾ 20 ರಷ್ಟೂ ಇಲ್ಲ. ಸರಾಸರಿ ವೇತನದಿಂದ ಕನಿಷ್ಟ ಅವಶ್ಯಕತೆಯ ಶೇಕಡಾ 80 ರಷ್ಟು ಮಾತ್ರ ಖರೀದಿ ಮಾಡಲು ಸಾಧ್ಯ.

ಮಹಾಧಿವೇಶನದಲ್ಲಿ ಮಂಡಿಸಲಾದ ವರದಿ ಇಂತಹ ಗಂಭೀರ ಪರಿಸ್ಥಿತಿಯಲ್ಲಿ ರಶ್ಯನ್ ಕಾರ್ಮಿಕ ವರ್ಗ ಹತಾಶವಾಗಿಲ್ಲ, ಕೈ ಚೆಲ್ಲಿ ಕೂತಿಲ್ಲ ಎಂದಿದೆ. 1996 ರ ನವಂಬರ್ 5 ರಂದು ಒಂದುವರೆ ಕೋಟಿ ಕಾರ್ಮಿಕರು ತಮ್ಮ ಬಾಕಿ ವೇತನ ಕೊಡುವಂತೆ ಒತ್ತಾಯಿಸಿ ಒಂದು ದಿನದ ಮುಷ್ಕರ ನಡೆಸಿದರು. ಕೈಗಾರಿಕೆಯ ಮ್ಯಾನೇಜ್‌ಮೆಂಟುಗಳು ಮತ್ತು ಸರಕಾರದ ಅಸಹಕಾರ ಮತ್ತು ಕೈಗಾರಿಕೆ ಬಗ್ಗೆ ತಿರಸ್ಕಾರ ನೀತಿಯಿಂದಾಗಿ ಭಾರಿ ರಾಷ್ಟ್ರವ್ಯಾಪಿ ಕಾರ್ಯ ಚಟುವಟಿಕೆಗಳ ಅವಶ್ಯಕತೆ, ಸದ್ಯಕ್ಕೆ ರಶ್ಯದ ಕೈಗಾರಿಕೆಗಳನ್ನು ರಕ್ಷಿಸುವ ಸರಕಾರದ ಕ್ರಮಗಳ ಬಗ್ಗೆ ಒತ್ತಡ ಹೇರುವುದಕ್ಕೆ ಆದ್ಯತೆ ನೀಡಲಾಗುವುದು. ಕಾರ್ಮಿಕ ವರ್ಗದ ಹೊಸ ವಿಭಾಗಗಳನ್ನು ಸಂಘಟಿಸುವ ನಿರ್ಧಾರವನ್ನು ಮಹಾಧಿವೇಶನ ತೆಗೆದುಕೊಂಡಿತು.

ಮಹಾಧಿವೇಶನದಲ್ಲಿ 49 ದೇಶಗಳಿಂದ 91 ಸೌಹಾರ್ದ ಪ್ರತಿನಿಧಿಗಳು ಹಾಗೂ 13 ಅಂತರ್‌ರಾಷ್ಟ್ರೀಯ ಸಂಘಟನೆಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ಸಿಐಟಿಯು ಹಾಗೂ ಎಐಟಿಯುಸಿ ಪ್ರತಿನಿಧಿಗಳು ಭಾಗವಹಿಸಿದ್ದರು. ಸಿಐಟಿಯು ಪರವಾಗಿ ಚಿತ್ತಬ್ರತ ಮಜುಂದಾರ್ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು.

ಟರ್ಕಿ-ಗ್ರೀಸ್ ವಿರಸ-ಸೈಪ್ರಸ್ ಬಗ್ಗೆ

ಸೈಪ್ರಸ್ ವಿಮಾನವನ್ನು ಹೊಡೆದುರುಳಿಸುವ ಕ್ಷಿಪಣಿಗಳನ್ನು ರಶ್ಯಾದಿಂದ ಖರೀದಿಸಿದ್ದು ಟರ್ಕಿ-ಗ್ರೀಸ್ ವಿರಸಕ್ಕೆ ಕಾರಣವಾಗಿದೆ. ಸೈಪ್ರಸ್‌ನ ಉತ್ತರ ಭಾಗವನ್ನು ಟರ್ಕಿ ಕಸಿದುಕೊಂಡು ಒಂದು ಬಾಲಬಡುಕ ಸರಕಾರ ಸ್ಥಾಪಿಸಿದೆ. ಸೈಪ್ರಸ್ ದಕ್ಷಿಣದಲ್ಲಿ ಕ್ಷಿಪಣಿಗಳನ್ನು ಸ್ಥಾಪಿಸಿದರೆ, ಆ ನೆಲೆಗಳನ್ನು ನಾಶ ಮಾಡುವುದಾಗಿ ಟರ್ಕಿ ಬೆದರಿಸಿದೆ. ಅಲ್ಲದೆ ಕ್ಷಿಪಣಿಗಳು ರಶ್ಯಾದಿಂದ ಸೈಪ್ರಸ್‌ಗೆ ಬರುವ ಹಡಗುಗಳನ್ನು ಟರ್ಕಿಯ ಕೊಲ್ಲಿಯಲ್ಲಿ ದಿಗ್ಬಂಧನ ಕ್ಕೊಳಪಡಿಸುವುದಾಗಿ ಬೆದರಿಸಿದೆ. ಸೈಪ್ರಸ್‌ನ ಬೆಂಬಲದಿಂದ ಗ್ರೀಸ್ ಟರ್ಕಿಯ ಬೆದರಿಕೆ ಖಂಡಿಸಿ, ಟರ್ಕಿ ಪರವಾಗಿ ಮಿಲಿಟರಿ ಕಾರ್ಯಾಚರಣೆ ಕೈಗೊಳ್ಳು ವುದಾಗಿ ಬೆದರಿಸಿದೆ. ಟರ್ಕಿ-ಗ್ರೀಸ್ ಎರಡೂ ನಾಟೋದ ಸದಸ್ಯ ದೇಶಗಳು ಎಂದು ಇಲ್ಲಿ ಸ್ಮರಿಸಬಹುದು.

ದಕ್ಷಿಣ ಕೊರಿಯಾದ ಕಾರ್ಮಿಕರ ಹೋರಾಟಕ್ಕೆ ಸಿಐಟಿಯು, ಕೃಷಿ ಕೂಲಿಕಾರರ ಬೆಂಬಲ

ಸಿಐಟಿಯು ದಕ್ಷಿಣ ಕೊರಿಯದ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹಾಗೂ ಒಂದು ಹೊಸ ಕಾರ್ಮಿಕ ಕಾನೂನಿನ ಅನಿಷ್ಟಕಾರಿ ಅಂಶಗಳ ವಿರುದ್ಧ ನಡೆಸುತ್ತಿರುವ ಹೋರಾಟದೊಂದಿಗೆ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸಿದೆ. 'ಮುಂಜಾವಿನ ಮೊದಲ ಅಧಿವೇಶನ ವೊಂದರಲ್ಲಿ ಕೇವಲ ಏಳು ನಿಮಿಶಗಳಲ್ಲಿ ಅಂಗೀಕರಿಸಿದ ಈ ದುಷ್ಟ ಕಾನೂನು ಮುಷ್ಕರ ನಿರತ ಕಾರ್ಮಿಕರನ್ನು ಲೇ-ಆಫ್ ಮಾಡಿ ತಾತ್ಕಾಲಿಕ ಕಾರ್ಮಿಕರನ್ನು ದುಡಿಸಿ ಕೊಳ್ಳಲು ಮಾಲಕರಿಗೆ ಅಧಿಕಾರ ನೀಡುತ್ತದೆ. ಇದು ಮುಷ್ಕರವನ್ನು ಅಸಾಧ್ಯಗೊಳಿಸುವ, ನಿರುದ್ಯೋಗಿಗಳನ್ನು ಮುಷ್ಕರ ನಿರತರ ವಿರುದ್ಧ ಬಳಸುವ ಇನ್ನೊಂದು ವಿಧಾನವಷ್ಟೆ. ದಕ್ಷಿಣ ಕೊರಿಯ ಸರಕಾರ ಮತ್ತು ದೊಡ್ಡ ಉದ್ದಿಮೆಗಳ ಮಾಲಕರು-ಕೊರಿಯಾದವರು ಮತ್ತು ವಿದೇಶೀಯರು ಕೂಡಾ ಈ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ದಕ್ಷಿಣ ಕೊರಿ ಯದ 'ಸ್ಪರ್ಧಾತ್ಮಕತೆ'ಯನ್ನು ಉಳಿಸಿಕೊಳ್ಳಲು ಉತ್ಪಾದನಾ ವೆಚ್ಚ ಇಳಿಸಲು ಇದು ಅಗತ್ಯವೆನ್ನುತ್ತಿದ್ದಾರೆ ಎಂದಿನಂತೆ. ಸಿಐಟಿಯು ಹೇಳಿಕೆ ದಕ್ಷಿಣ ಕೊರಿಯಾ ಸರಕಾರದ ದಮನಕಾರಿ ಕ್ರಮಗಳನ್ನು ಖಂಡಿಸಿದೆ. 'ಮುಷ್ಕರ ನಿರತ ಕಾರ್ಮಿಕರಿಗೆ ರೋಮನ್ ಕ್ಯಾಥೊಲಿಕ್ ಪಾದ್ರಿಗಳ ಬೆಂಬಲ ಕಾರ್ಮಿಕರ ಈ ಹೋರಾಟಕ್ಕಿರುವ ಸಾಮಾಜಿಕ ಅನುಮೋದನೆಯನ್ನು ಸೂಚಿಸುತ್ತದೆ ಎಂದಿದೆ.

ಈಗಿನ ಅಭೂತಪೂರ್ವವಾದ ಅಸಂತೃಪ್ತಿಯ ಅಲೆ "ಏಶ್ಯನ್ ಹುಲಿಗಳ ಆರ್ಥಿಕದ ಶಕ್ತಿ ಕಾರ್ಮಿಕರ ಹಕ್ಕುಗಳ ಒಳಿತಿಗೆ ಗ್ಯಾರಂಟಿ ನೀಡಿದೆ" ಎಂಬುದೊಂದು ಮಿಥ್ಯೆ ಎಂದು ಮತ್ತೊಮ್ಮೆ ಸಾಬೀತು ಮಾಡಿದೆ. ಈ ಹುಲಿಗಳು ಕಾರ್ಮಿಕರ ಹಕ್ಕುಗಳನ್ನು ನುಂಗಿಹಾಕಿಬಿಡುವ ಅಪಾಯವಿದೆಯೆಂಬುದನ್ನೇ ಈ ಹೋರಾಟ ತೋರಿಸಿಕೊಟ್ಟಿದೆ ಎಂದು ಸಿಐಟಿಯು ಅಭಿಪ್ರಾಯಪಟ್ಟಿದೆ.

ಈ ಕಾನೂನನ್ನು ರದ್ದು ಮಾಡಬೇಕೆಂದು ಒತ್ತಾಯಿಸಿರುವ ಸಿಐಟಿಯು ಭಾರತದ ಕಾರ್ಮಿಕ ಸಂಘಗಳು ದಕ್ಷಿಣ ಕೊರಿಯಾದ ಕಾರ್ಮಿಕರನ್ನು ಬೆಂಬಲಿಸಬೇಕು ಎಂದು ಕರೆ ನೀಡಿದೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಒಂದು ಪ್ರತ್ಯೇಕ ಹೇಳಿಕೆಯಲ್ಲಿ ದಕ್ಷಿಣ ಕೊರಿಯಾದ ಕಿಮ್ ಯೊಂಗ ಸಾಮ್ ಸರಕಾರ ಪ್ರದರ್ಶನಗಳ, ಉದ್ಯೋಗ ಭದ್ರತೆಯ ಹಾಗೂ ಮುಷ್ಕರದ ಹಕ್ಕುಗಳನ್ನು ಬುಡಮೇಲು ಮಾಡಲು ಪಿತೂರಿಗಿಳಿದಿದೆ ಎಂದು ಖಂಡಿಸಿದೆ. ದಕ್ಷಿಣ ಕೊರಿಯ ಸರಕಾರ ತಕ್ಷಣ ಈ ಪಕ್ಷಪಾತ ಪೂರ್ಣ ಕಾನೂನನ್ನು ರದ್ದು ಮಾಡಿ ಕಾರ್ಮಿಕರೊಂದಿಗೆ ಸಂಘರ್ಷವನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದೆ. ದಕ್ಷಿಣ ಕೊರಿಯದ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಧನಸಹಾಯ ಹಾಗೂ ನೈತಿಕ ಬೆಂಬಲ ನೀಡಬೇಕು ಎಂದು ಭಾರತೀಯ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.



ದಕ್ಷಿಣ ಕೊರಿಯಾದ ಪೋಲೀಸರು ಅಶ್ರುವಾಯು ಜಲಫಿರಂಗಿಗಳಿಂದ ಕಾರ್ಮಿಕರ ಪ್ರತಿಭಟನೆಯನ್ನು ಹತ್ತಿಕ್ಕಲು ಯತ್ನಿಸುತ್ತಿದ್ದಾರೆ.

ಓಹ್! ಎಂಥ ಒಳ್ಳೆಯ ಐಡಿಯಾ!

"ಐಕ್ಯರಂಗ" ಹುಟ್ಟಿಸಿದ ಬೆರಗು

"ಓಹ್! ಎಂಥ ಒಳ್ಳೆಯ ಐಡಿಯಾ! ಮಂಗಳೂರಿನ ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಯ ಕಚೇರಿ ಇರುವ, 'ವಿಕಾಸ'ದಲ್ಲಿ ಸಂಜೀವ್ ಬಳ್ಳೂರ್ ಹೀಗೆ ಉದ್ಗಾರ ಎತ್ತಿದರು.

ಮೊನ್ನೆ ಯಾವುದೋ ಕೆಲಸಕ್ಕೆಂದು ಮಂಗಳೂರಿನಿಂದ ಬೆಂಗಳೂರಿಗೆ ಹೋದ ಇವರು ಬೆಂಗಳೂರಿನ ಬಿಟಿಎಸ್ ಬಸ್ ನಿಲ್ದಾಣಕ್ಕೆ ಬಂದಾಗ ಆಶ್ಚರ್ಯ ಕಾದಿತ್ತು.

ಐಕ್ಯರಂಗ ಬೇಕೇ? ಕಾರ್ಮಿಕರ, ರೈತರ, ಮುಖವಾಣಿ ಈಗಿನ ರಾಜಕೀಯದ ಸರಿಯಾದ ವಿಮರ್ಶೆ ಎಂದು ಸಂಗಾತಿಗಳು ಬಸ್ ನಿಲ್ದಾಣದಲ್ಲಿ ಐಕ್ಯರಂಗ ಹಿಡಿದು ಮಾರುತ್ತಿದ್ದಾರೆ. ಬಿಟಿಎಸ್‌ನ ಬಸ್ ಹೊರಡುವುದಕ್ಕೆ ಕೆಲವೇ ನಿಮಿಷವಿರುವಾಗ ಹಲವು ಜನ ಬಸ್ ಏರಿ ಕುಳಿತಿರುವಾಗ ಈ ಸಂಗಾತಿಗಳು ಬಸ್ ಹತ್ತಿ ಕೈಯಲ್ಲಿ ಐಕ್ಯರಂಗ ಹಿಡಿದು ಚಿಕ್ಕದಾದ, ಚೊಕ್ಕ ಭಾಷಣ ಮಾಡುತ್ತಾರೆ. ಐಕ್ಯರಂಗ ಏನು? ಇದನ್ನು ಓದಬೇಕು ಏಕೆ? ಎಂಬುದನ್ನು ವಿವರಿಸುತ್ತಾರೆ.

ಮಾತು ಮುಗಿಸುತ್ತಿದ್ದಂತೆ ಜನರ ಬಳಿ ಹೋಗಿ ಐಕ್ಯರಂಗ ಮಾರುತ್ತಾರೆ. ಐಕ್ಯರಂಗ ಕೊಳ್ಳುವುದಿಲ್ಲ ಎಂದವರು ಯಾರು? ಜನರಿಂದ ಉತ್ಸಾಹಕರ ಪ್ರತಿಕ್ರಿಯ ಬಂದಿದೆ. ಐಕ್ಯರಂಗ ಮಾರುವವರ ಉತ್ಸಾಹವನ್ನು ಹೆಚ್ಚಿಸಿದೆ.

ಇದನ್ನು ಕಂಡೇ ವಿಜ್ಞಾನ, ಯುವಜನರ ಚಳುವಳಿಯಲ್ಲಿ ಭಾಗಿಯಾಗಿರುವ ಸಂಗಾತಿ ಸಂಜೀವ್ ಬಳ್ಳೂರ್ ಅವರು ಎಂತಹ ಒಳ್ಳೆಯ ಐಡಿಯಾ... ಎಂದು ಬೆರಗಾಗಿದ್ದು.

ಹೀಗೆ ಭಾಷಣ ಮಾಡಿ ಐಕ್ಯರಂಗ ಕೊಟ್ಟಾಗ ಎಷ್ಟೋ ಜನ ಕೊಂಡರು. ನಾನೂ ಒಂದು ಪ್ರತಿ ಕೊಂಡೆ. ಮಾರುತ್ತಿದ್ದವರನ್ನು ಕರೆದು ಹೆಸರು ವಿಚಾರಿಸಿದೆ. ಇವರ ಹೆಸರನ್ನೆಲ್ಲಾ ಐಕ್ಯರಂಗದಲ್ಲಿ ಓದಿದ್ದೆ. ಅವರೇ ಐಕ್ಯರಂಗ ಮಾರುತ್ತಿದ್ದವರು ಎಂದು ಗೊತ್ತಾಗಿರಲಿಲ್ಲ ಎಂದು ಹೇಳಿದರು.

ಎಂತಹ ಐಡಿಯಾ...ಇಲ್ಲಿಯೂ ಅದೇ ರೀತಿ ಮಾರಾಟ ಮಾಡಬೇಕು ಎನ್ನುತ್ತಾರೆ.

ಇದು ಎಲ್ಲ ಜಿಲ್ಲೆಯಲ್ಲೂ ಸಾಧ್ಯವಾಗುವುದಾದರೆ ಹೌದಲ್ಲವೇ ಎಂಥ ಒಳ್ಳೆಯ ಐಡಿಯಾ!

ಮಂಗಳೂರಿನಲ್ಲಿ ಐಕ್ಯರಂಗ ಓದುಗರ ಬಳಗ

ಐಕ್ಯರಂಗದ ಪ್ರಸಾರ ಹೆಚ್ಚುವುದು ಹೇಗೆ? ಐಕ್ಯರಂಗದಲ್ಲಿ ಬರುವ ಸುದ್ದಿ, ಲೇಖನಗಳಿಂದ ಏನು ಪ್ರಯೋಜನ? ಈ ಎರಡಕ್ಕೂ ಉತ್ತರವನ್ನು ಮಂಗಳೂರಿನ ಜೀವವಿಮಾ ನಿಗಮ ನೀಡಿದೆ.

ಮಂಗಳೂರು ಕಾರ್ನಾಡ್ ಸದಾಶಿವರಾಯರ ರಸ್ತೆಯಲ್ಲಿರುವ ಜೀವ ವಿಮಾ ನಿಗಮ(ಎಲ್‌ಐಸಿ)ದಲ್ಲಿ ಮೊದಲು ಆರು ಮಂದಿ ಐಕ್ಯರಂಗ ಕೊಳ್ಳುತ್ತಿದ್ದರು. ಐಕ್ಯರಂಗದಲ್ಲಿ ಬರುವ ವಿಶಿಷ್ಟ ಲೇಖನಗಳು, ಜನರಿಗೆ ಅತ್ಯಗತ್ಯವಾಗಿ ಬೇಕಾದ ಸುದ್ದಿ, ಈ ಲೇಖನಗಳು ನೀಡುವ ರಾಜಕೀಯ ದೃಷ್ಟಿಕೋನದಿಂದ ಪ್ರಭಾವಿತರಾದ ಕೆಲವು ಸಂಗಾತಿಗಳು ಸೇರಿ ಐಕ್ಯರಂಗ ಓದುಗರ ಬಳಗವನ್ನು ಸ್ಥಾಪಿಸಿಕೊಂಡರು.

ಪ್ರತೀ ತಿಂಗಳೂ ಈ ಐಕ್ಯರಂಗ ಓದುಗರ ಬಳಗದ ಸಭೆ ಸೇರುತ್ತದೆ. ಐಕ್ಯರಂಗದಲ್ಲಿ ಬಂದಿರುವ ಲೇಖನಗಳ ಬಗ್ಗೆ ಚರ್ಚೆ ರಾಜಕೀಯ ವಿದ್ಯಮಾನಗಳ ಚರ್ಚೆಯನ್ನು ನಡೆಸುತ್ತದೆ.

ಈ ಬಳಗದ ಸಂಚಾಲಕರಾಗಿ ನಾಗೇಶ್‌ಕುಮಾರ್ ಆಯ್ಕೆಯಾಗಿದ್ದಾರೆ. ಪ್ರತೀ ತಿಂಗಳೂ ಐಕ್ಯರಂಗ ಓದುಗರ ಬಳಗದಿಂದ ಅಧ್ಯಯನ ಕೂಟ ನಡೆಸುವ ಯೋಜನೆ ಇದೆ ಎನ್ನುತ್ತಾರೆ.

ಮಧುರೈ ಸಮಾವೇಶ 'ಕಾರ್ಮಿಕ ಸಂಘಟನೆಗಳಲ್ಲಿ ಮಾತ್ರ ಇದ್ದರೆ ಸಾಲದು ಕಾರ್ಯಕರ್ತರ ರಾಜಕೀಯ ಅರಿವು ಹೆಚ್ಚಿಸಿ ಅವರನ್ನು ಕಾರ್ಮಿಕ ವರ್ಗದ ಪಕ್ಷಕ್ಕೂ ತರಬೇಕು' ಎಂದು ತೀರ್ಮಾನ ತೆಗೆದುಕೊಂಡಿತು. ಐಕ್ಯರಂಗ ಇದಕ್ಕೆ ಸರಿಯಾದ ಸರಳವಾದ ಮಾರ್ಗ ಎಂದು ಇಲ್ಲಿನವರಿಗೆ ಅನಿಸಿದೆ.

ಹಲವು ಜಿಲ್ಲೆಗಳಲ್ಲಿ ಕೇವಲ ಟ್ರೇಡ್ ಯೂನಿಯನ್ ಮಾತ್ರವಲ್ಲ ಪಕ್ಷದ ನೇತೃತ್ವವನ್ನು ಎಲ್‌ಐಸಿಯವರು ವಹಿಸಿದ್ದಾರೆ. ಇಂತಹ ಉತ್ಸಾಹ, ರಾಜಕೀಯ ನೋಟ ಬರಬೇಕಾದರೆ ಸತತ ರಾಜಕೀಯ ಚರ್ಚೆ, ಓದಿನಿಂದ ಮಾತ್ರ ಸಾಧ್ಯ ಎನ್ನುತ್ತಾರೆ ನಾಗೇಶ್ ಕುಮಾರ್. ಇನ್ನೂ ಹಲವರನ್ನು ಐಕ್ಯರಂಗ ಓದುಗರ ಬಳಗದಲ್ಲಿ ಸೇರಿಸುವ, ಹಲವರಿಗೆ ಐಕ್ಯರಂಗ ತಲುಪಿಸುವ ವಿಶ್ವಾಸ ಇವರದ್ದು.

ಮಂಗಳೂರಿನಲ್ಲಿರುವ ಎಲ್‌ಐಸಿಯ ಮೂರು ಶಾಖೆಗಳು, ಬಂಟ್ವಾಳ ಎಲ್ಲ ಕಡೆಯೂ ಈ ಬಳಗ ಆರಂಭಿಸುವ ಆಲೋಚನೆ ಇವರದ್ದು.

ನೈಜ ವಿಕೇಂದ್ರಿಕರಣಕ್ಕೆ ಆಡಳಿತ ಸುಧಾರಣಾ ಆಯೋಗ ರಚಿಸಿ

– ಇ.ಎಂ.ಎಸ್. ಸಲಹೆ

ಅಧಿಕಾರಗಳ ವಿಕೇಂದ್ರೀಕರಣ ನಿಜವಾಗಿಯೂ ಜನಗಳಿಗೆ ಪ್ರಯೋಜನವಾಗಬೇಕಾದರೆ ಆಡಳಿತ ವಿಧಿ ವಿಧಾನಗಳಲ್ಲಿ ಸುಧಾರಣೆ ಅಗತ್ಯ. ಈ ಬಗ್ಗೆ ಸರಕಾರಕೆ ಸಲಹೆ ನೀಡಲು ಒಂದು ಆಡಳಿತ ಸುಧಾರಣಾ ಆಯೋಗವನ್ನು ನೇಮಿಸಬೇಕು ಎಂದು ಹಿರಿಯ ಸಿಪಿಐ(ಎಂ) ಮುತ್ಸದ್ದಿ ಇ.ಎಂ.ಎಸ್. ನಂಬೂದರಿಪಾಡ್ ತಮ್ಮ ನಿವಾಸದಲ್ಲಿ ನಡೆದ ಪತ್ರಿಕಾ ಸಮ್ಮೇಳನವೊಂದರಲ್ಲಿ ಕರೆ ನೀಡಿದರು.

ಪಂಚಾಯತುಗಳಿಗೆ ನಿಜವಾದ ಅಧಿಕಾರ ಮತ್ತು ಕೆಲಸದ ಸ್ವಾತಂತ್ರ್ಯ ಇರಬೇಕಾದರೆ 47 ನಿಯಮಾವಳಿಗಳನ್ನು ಹಾಗೂ ಕಾನೂನಿನ ಅಂಶಗಳನ್ನು ತುರ್ತಾಗಿ ತಿದ್ದುಪಡಿ ಮಾಡಬೇಕಾಗುತ್ತದೆ ಎಂಬುದನ್ನು ಈಗಾಗಲೇ ಗುರುತಿಸಲಾಗಿದೆ ಎಂದ ಇ.ಎಂ.ಎಸ್. ಪಂಚಾಯತುಗಳಿಗೆ ಸಂಬಂಧಪಟ್ಟ ಕಾನೂನಗಳನ್ನು ಬಹಳಷ್ಟು ತಿದ್ದುಪಡಿ ತರಬೇಕಾಗಿದೆ, ಆಗಲೇ ಅವು ಅರ್ಥಪೂರ್ಣವಾಗುತ್ತವೆ ಎಂದರು.

ಎಲ್ಲಾ ಇಲಾಖೆಗಳಿಗೆ ಅನ್ವಯಿಸುವ ಇಂತಹ ಸಮಗ್ರ ಸಾಂಸ್ಥಿಕ ಹಾಗೂ ವಿಧಿ-ವಿಧಾನಗಳ ಸುಧಾರಣೆಗಳಿಲ್ಲದೆ ಅಧಿಕಾರದ ವಿಕೇಂದ್ರೀಕರಣದ ಅನುಷ್ಠಾನವಾಗಲೀ, ಸ್ಥಳೀಯ ಅಭಿವೃದ್ಧಿ ಯೋಜನೆಗಳು ಹಾಗೂ ಕಾಮಗಾರಿಗಳನ್ನು ಆರಿಸಿಕೊಳ್ಳುವಲ್ಲಿ ಹಾಗೂ ಜಾರಿಗೊಳಿಸುವಲ್ಲಿ ಜನಗಳು ಪಾತ್ರ ವಹಿಸುವುದಾಗಲೀ ಸಾಧ್ಯವಾಗುವುದಿಲ್ಲ ಎಂದು ಇಎಂಎಸ್ ನುಡಿದರು.

ಒಂಭತ್ತನೇ ಯೋಜನೆ ಜನಗಳ ಯೋಜನೆಯಲ್ಲಿ ನಿರ್ದಿಷ್ಟವಾಗಿ ಎಲ್ಲಾ ಹಂತಗಳಲ್ಲಿ ಉತ್ಪಾದಕತೆ ಹೆಚ್ಚಿಸುವ, ಉದ್ಯೋಗಾವಕಾಶಗಳನ್ನು ನಿರ್ಮಿಸುವ, ಜನಗಳ ಜೀವನ ಮಟ್ಟವನ್ನು ಎತ್ತರಿಸುವ ಗುರಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಇಎಂಎಸ್ ಸ್ಥಳೀಯ ಸಂಸ್ಥೆಗಳ, ಸ್ಥಳೀಯ ಅಭಿವೃದ್ಧಿ ಆಂದೋಲನಗಳ ಮುಖಂಡರಿಗೆ, ಸರಕಾರಿ ಅಧಿಕಾಳಿಗೆ ಮತ್ತಿತರರಿಗೆ ಮನವಿ ಮಾಡಿದರು.

(ಐಎನ್‌ಎನ್)

ಇದನ್ನು ಕೇಳಿದ್ದೀರಾ? ಕಂಡಿದ್ದೀರಾ?

ದುಂದುವೆಚ್ಚ ಎನ್ನುವುದು ಸರಕಾರಿ ಸಂಸ್ಥೆಗಳ ಸಹಜ ಸ್ವಭಾವ. ಖಾಸಗಿಯವರು ಹಾಗೆಲ್ಲ ಮಾಡುವುದಿಲ್ಲ, ಬಹಳ ದಕ್ಷರು ಎಂಬುದು ನಿಮ್ಮ ಅಭಿಪ್ರಾಯವೂ ಆಗಿರಬಹುದು. ಆದರೆ ಇದು ನಿಜವಲ್ಲ. ಒಂದು ಉದಾಹರಣೆ ಕೇಳಿ.

ಎಲ್‌ಅಂಡ್ ಟಿ ಒಂದು ದೊಡ್ಡ ಬಹು ರಾಷ್ಟ್ರೀಯ ಕಂಪನಿ. ದೇಶಾದ್ಯಂತ ಇದರ ಶಾಖೆಗಳು, ಕಾರ್ಖಾನೆಗಳಿವೆ. ಬೆಂಗಳೂರಿನಲ್ಲೂ ಒಂದಿದೆ. ಇಲ್ಲಿ 750 ಕಾರ್ಮಿಕರು, ಅವರ ಕೆಸದ ಮೇಲ್ವಿಚಾರಣೆ ನೋಡಲು ಸೂಪರ್‌ವೈಸರ್‌ಗಳು, ಅಧಿಕಾರಿಗಳು ಇತ್ಯಾದಿ 500 ಮಂದಿ! 75 ಮೆನೇಜರುಗಳ, 200 ಇಂಜಿನಿಯರುಗಳು, 65 ಕಾರುಗಳು! ಸರಿ ಇದು ನಮ್ಮ ಇಷ್ಟ, ಇದನ್ನು ಕೇಳಲು ನೀವು ಯಾರು ಎಂದು ಕಾರ್ಮಿಕರಿಗೆ ಮ್ಯಾನೇಜ್‌ಮೆಂಟ್ ಸವಾಲು. ನೀವು ಹೇಳಬಹುದು ಆ ಮಾತು ಸರಿಯಲ್ಲವೇ ಎಂದು. ಆದರೆ ಕಾರ್ಮಿಕರ ಖರ್ಚಿನಲ್ಲೇ ಅವರ ಕೆಲಸದ ಭಾರ ಹೆಚ್ಚಿಸಿ ಕಾರ್ಮಿಕರ ಸೌಲಭ್ಯಗಳನ್ನು, ಕಾನೂನು ಬದ್ಧ ಹಕ್ಕುಗಳನ್ನು ಕಡಿತ ಮಾಡಿ ಈ ದುಂದುವೆಚ್ಚ!

ಇದನ್ನು ಪ್ರತಿಭಟಿಸಿ ಕಾರ್ಮಿಕರು ಜನವರಿ 21 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಕೈಗೊಂಡಿದ್ದಾರೆ. ಅಪ್ರೆಂಟಿಸ್‌ಗಳು, ಕ್ಯಾಶುವೆಲ್ ಕಾರ್ಮಿಕರೂ ಮುಷ್ಕರದಲ್ಲಿ ಸೇರಿಕೊಂಡಿದ್ದಾರೆ. ಆಡಳಿತ ಹೇಳಿದ ಉತ್ಪತ್ತಿ ಕೊಡಲಿಲ್ಲವೆಂದು ವಜಾ ಮಾಡಿದ ಕಾರ್ಮಿಕರನ್ನು ಮತ್ತೆ ತೆಗೆದುಕೊಳ್ಳಬೇಕು, ಸಂಬಳ ಕಡಿತವನ್ನು ಪ್ರತಿಭಟಿಸಿ ಹತ್ತು ಕಾರ್ಮಿಕರ ಅಮಾನತು ರದ್ದಾಗಬೇಕು, ಸಂಘಟನೆಯನ್ನು ಮುರಿಯಲು ಇಬ್ಬರು ಕಾರ್ಮಿಕರ ಮೇಲೆ ಹೊರಿಸಿದ ಆಪಾದನೆಯನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಕಡಿತ ಮಾಡಿದ ಸಂಬಳವನ್ನು ಪುನಃ ಕೊಡಬೇಕು ಎಂಬುದು ಕಾರ್ಮಿಕರ ಬೇಡಿಕೆಗಳು.

ಅಷ್ಟೇ ಅಲ್ಲ ಈ ಘಟಕಕ್ಕೆ 20-25 ಮ್ಯಾನೇಜರುಗಳು, 70-80 ಇಂಜಿನಿಯರ್‌ಗಳು ಸಾಕು, ಇತರರನ್ನು ಬೇರೆ ಘಟಕಕ್ಕೆ ವರ್ಗಾವಣೆ ಮಾಡಬೇಕು, 10-15 ಕಾರುಗಳನ್ನು ಇಟ್ಟುಕೊಂಡರೆ ಸಾಕು, ಇವನ್ನೆಲ್ಲಾ ಸಾಕಲು ಕಾರ್ಮಿಕರಿಗೆ ಕಿರುಕುಳಕೊಡುವುದನ್ನು ನಿಲ್ಲಿಸಬೇಕು ಎಂದು ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ. ಜನವರಿ 25 ರಂದು ಲೇಬರ್ ಕಮಿಶನರ್ ಸಂಧಾನಕ್ಕೆ ಕರೆದಿದ್ದಾರೆ. ದುಂದುವೆಚ್ಚದ ಮ್ಯಾನೇಜ್‌ಮೆಂಟ್ ಏನು ಮಾಡುತ್ತದೋ ನೋಡಬೇಕಾಗಿದೆ.

"ನಿರಂತರ" ಸಂವಾದ

ವ್ಯಂಗ್ಯಚಿತ್ರಕಾರ ಹರಿಣಿಯವರೊಂದಿಗೆ

ಎಂ.ಎಫ್. ಹುಸೇನ್ ಅವರ ಕಲಾಕೃತಿಗಳ ಮೇಲೆ ನಡೆದಿರುವ ಧಾಳಿಯನ್ನ ನೋಡಿದರೆ ಮುಂದೆ ವ್ಯಂಗ್ಯಚಿತ್ರಗಳನ್ನು ಹತ್ತಿಕ್ಕುವ ಕಾಲವೂ ಬರಬಹುದು ಎಂದು ಖ್ಯಾತ ವ್ಯಂಗ್ಯಚಿತ್ರಕಾರ ಹರಿಣಿ ಅವರು ಅಭಿಪ್ರಾಯಪಟ್ಟರು.

ಸಮಾನ ಮನಸ್ಕ ಸಂಘಟನೆಗಳು ಆರಂಭಿಸಿರುವ 'ನಿರಂತರ' ಗೋಡೆ ಪತ್ರಿಕೆಯ ಪುನರಾರಂಭದ ಎರಡನೇ ಸಂಚಿಕೆಯನ್ನು ಬಿಡುಗಡೆ ಮಾಡಿ ನಂತರ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ವ್ಯಂಗ್ಯಚಿತ್ರಗಳನ್ನು ಸಹಿಸದಿರುವ ವಾತಾವರಣವೂ ಉಂಟಾಗಿದೆ. ವ್ಯಂಗ್ಯಚಿತ್ರಗಳನ್ನು ನೋಡಿ ಬೆದರಿಕೆಯನ್ನು ಒಡ್ಡುತ್ತಾರೆ. ವ್ಯಂಗ್ಯಚಿತ್ರ ಸಮಾಜಕ್ಕೆ ಕನ್ನಡಿ ಹಿಡಿಯುತ್ತದೆ. ಎಷ್ಟೋ ಜನರಿಗೆ ಕನ್ನಡಿಯಲ್ಲಿ ತಮ್ಮನ್ನು ನೋಡಿಕೊಂಡರೆ ಆಗುವುದಿಲ್ಲ.


ವ್ಯಂಗ್ಯಚಿತ್ರ ಸಮಾಜದ ಅಂಕುಡೊಂಕುಗಳನ್ನು ತೋರಿಸಬಹುದು. ಆದರೆ ಅದರಿಂದಲೇ ಸುಧಾರಣೆ ಆಗುತ್ತದೆ ಎಂದು ನಾನು ಭಾವಿಸಿಲ್ಲ. ಹಲವಾರು ಸಮಸ್ಯೆಗಳು ದಶಕಗಳು ಕಳೆದರೂ ಹಾಗೇ ಉಳಿದಿದೆ. ಹತ್ತು ವರ್ಷಗಳ ಹಿಂದೆ ವಿದ್ಯುತ್ ಸಮಸ್ಯೆಯ ಬಗ್ಗೆ ಗಮನ ಸೆಳೆಯಲು ವಿದ್ಯುತ್ ಬಲ್ಬ್‌ನಲ್ಲಿ ಸೀಮೆಎಣ್ಣೆ ಹಾಕಿ ದೀಪ ಉರಿಸುವ ವ್ಯಂಗ್ಯಚಿತ್ರ ಬರೆದೆ. ಆದರೆ ಪರಿಸ್ಥಿತಿ ಈಗಲೂ ಹಾಗೇ ಇದೆ ಎಂದರು.

ವ್ಯಂಗ್ಯಚಿತ್ರ ಪತ್ರಿಕೆಯ ಸಂಪಾದಕರ ಧೋರಣೆಯನ್ನು ಅವಲಂಬಿಸಬೇಕಾಗಿಲ್ಲ. ಆದರೆ ಸಂಪಾದಕರಿಂದ ಕೆಲವು ವ್ಯಂಗ್ಯಚಿತ್ರಗಳು ಮೂಲೆಗುಂಪಾದದ್ದು ಇದೆ ಎಂದರು.

ವ್ಯಂಗ್ಯಚಿತ್ರದ ಪ್ರಭಾವ ಪತ್ರಿಕೆ ಓದುಗರನ್ನು ಅವಲಂಬಿಸಿರುತ್ತದೆ. ವ್ಯಂಗ್ಯಚಿತ್ರಕಾರ ಹೇಗೆ ಸುದ್ದಿಗಳನ್ನು ಸದಾ ಬೆಂಬತ್ತುತ್ತಲೇ ಇರಬೇಕೋ ಹಾಗೆ ಓದುಗನೂ ಸುದ್ದಿಯ ಬಗ್ಗೆ ತಿಳಿದುಕೊಂಡಿರಬೇಕು. ಇಲ್ಲದಿದ್ದಲ್ಲಿ ವ್ಯಂಗ್ಯಚಿತ್ರಗಳು ಸಂವಹನಗೊಳ್ಳಲು ಸಾಧ್ಯವಿಲ್ಲ ಎಂದರು.

ಇಂದಿರಾಗಾಂಧಿ ವ್ಯಂಗ್ಯಚಿತ್ರಕಾರರಿಗೆ ತುಂಬಾ ಇಷ್ಟವಾಗಿದ್ದ ಕಾರ್ಟೂನ್ ಮುಖ. ಕರ್ನಾಟಕದಲ್ಲಿ ಆಗ ಗುಂಡೂರಾವ್ ಈಗ ಹೆಣ್ಣು ಹೆಂಡದ ಜೆ.ಎಚ್.ಪಟೇಲ್ ವ್ಯಂಗ್ಯಚಿತ್ರಕಾರರ ಪ್ರೀತಿಯ ವಸ್ತು ಎಂದರು.

ಸಂವಾದದಲ್ಲಿ ನಿರಂತರ ಸಂಪಾದಕರುಗಳಾದ ನಾಗೇಶ್ ಕುಮಾರ್, ತಾರಾನಾಥ್, ಶರತ್ ಕುಮಾರ್, ಬಾಲಕೃಷ್ಣ ಅಡೆಂಜ, ಸುಖೇಶ್, ಕಮಲಾಕ್ಷ, ಕೃಷ್ಣಪ್ಪ ಕೊಂಚಾಡಿ, ಮಾಧವ, ಡಿಪಿಕುಮಾರ್, ರಾಜಾರಾಂ, ಸತ್ಯಾ.ಎಸ್., ಜಿ.ಎನ್. ಮೋಹನ್. ನಾಗೇಶ್‌ಕುಮಾರ್ ಸ್ವಾಗತಿಸಿದರು ತಾರಾನಾಥ್ ವಂದಿಸಿದರು.



ಇದು ಸುದ್ದಿ, ಇದು ಸುದ್ದಿ

ಭಾರೀ ಕೈಗಾರಿಕೆಗಳು ದಕ್ಷಿಣ ಕನ್ನಡಕ್ಕೆ ಕಾಲಿಡುತ್ತಿರುವುದರಿಂದ ಇಲ್ಲಿ ನೆಲಕ್ಕೆ ಚಿನ್ನದ ಬೆಲೆ ಬಂದಿದೆ. ನೆಲದ ವ್ಯವಹಾರಗಳಲ್ಲಿ ಪರಿಣಿತರಾದ ಲ್ಯಾಂಡ್ ಲಿಂಕ್ಸ್ ಇತ್ತೀಚೆಗೆ ಒಂದು ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿ ಬಡಪಾಯಿ ಪತ್ರಕರ್ತರಿಗೆ ಚಿನ್ನವನ್ನೇ ಕಾಣಿಕೆಯಾಗಿ ನೀಡಿದರು. ಹೋಗಿದ್ದವರು ಸಂತಸದಿಂದ ಬೀಗಿದರು. ಹೋಗದವರು ಕಣ್ಣೀರಿಟ್ಟರು. ಚಿನ್ನ ಹೊಡೆದ ಪತ್ರಕರ್ತರು ಮಾರನೆಯ ದಿನ ಗಿರವಿ ಅಂಗಡಿಯಲ್ಲಿ ಅದರ ತೂಕ ಎಷ್ಟು ಎಂಬುದನ್ನು ಪತ್ತೆ ಹಚ್ಚಿದರಂತೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು